

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 140 Wednesday 05-02-2025 E-mail : maruti.b.hosamani76@gmail.com Page: 4 Price : Rs. 1/-


## ಶ್ರೀ ಕೋಡಿಕೊಪ್ಪದ ವೀರಪ್ಪಜ್ಜನವರ ಜೀವನ ದರ್ಶನ: ಪುರಾಣ ಪ್ರವಚನ ಸಮಾರಂಭ

**ಸಿಹಿ ಕಹಿ ಸುದ್ದಿ**

**ಕೋಡಿಕೊಪ್ಪ** : ನರೇಗಲ್ಲ ಸಮೀಪದ ಕೋಡಿಕೊಪ್ಪ ಗ್ರಾಮದಲ್ಲಿ ಹಠಯೋಗಿ ಕೋಡಿಕೊಪ್ಪದ ವೀರಪ್ಪಜ್ಜ ನವರ ಪುಣ್ಯಾರಾಧನೆ, ಶತಮಾನೋತ್ಸವ ಅಂಗವಾಗಿ ನಡೆದ ಶ್ರೀ ವೀರಪ್ಪಜ್ಜ ನವರ ಜೀವನ ದರ್ಶನ ಪುರಾಣ ಪ್ರವಚನ ಸಮಾರಂಭ ಉದ್ಘಾಟಿಸಿ ಆಶೀರ್ವಚನ ನೀಡಿದರು.



ಯೋಗಿಗಳು, ಮಹಾನ್ ಪುಣ್ಯ ಪುರುಷರು ಅವರನೀಡಿರುವಯಾವುದುಹೌದುಅದುಅಲ್ಲಾ, ಯಾವುದು ಅಲ್ಲಾ ಅದು ಹೌದು ಎನ್ನುವಂತೆ ಸತ್ಯ ದರ್ಶನ ತೋರ್ಪಡಿಸಿದ ಮಹಾನ್ ಪುರುಷರು, ಇಂತಹ ಮಹಾ ಮಹಿಮನ ಕ್ಷೇತ್ರದ ವ್ಯಾಪ್ತಿಯಲ್ಲಿ ಜೀವಿಸುತ್ತಿರುವ ನೀವುಗಳೆಲ್ಲರು ಪುಣ್ಯವಂತರೆಂದು ಮುಂಡರಗಿಯ ನಾ.ಜ ಶ್ರೀ ಅನ್ನದಾನೀಶ್ವರ ಸ್ವಾಮಿಗಳು ಹೇಳಿದರು. ಎಂದಿಗೂ ಯಾವುದು ಒಳಿತು ಎನ್ನಿಸುವುದಿಲ್ಲವೋ ಅದು ಪುರಾಣ. ಜಗತ್ತಿನಲ್ಲಿ ಅದೆಷ್ಟೋ ಪುರಾಣಗಳಿವೆ. ಅವೆಲ್ಲದರಲ್ಲಿ ಶ್ರೀ ವೀರಪ್ಪಜ್ಜ ನವರ ಪುರಾಣವು ಬಹಳಷ್ಟು ವೈಶಿಷ್ಟ್ಯತೆಯಿಂದ ಕೂಡಿದೆ. ನಿತ್ಯವೂ ಅದನ್ನು ಕೇಳಿ ನೀವುಗಳೆಲ್ಲ ಪುನೀತರಾಗಿ. ಜೀವನದಲ್ಲಿ ನೆಮ್ಮದಿಯಿಂದ ಬದುಕಲು ದೇವರಿದ್ದಾನೆ ಮತ್ತು ನಾವುಗಳು ಖಂಡಿತ ಸಾಯುತ್ತೇವೆ ಎಂಬ ಎರಡು ವಿಷಯ ನೆನಪಿನಲ್ಲಿಡ ಬೇಕು, ನಾವು ಬೇರೆಯವರಿಗೆ ಮಾಡಿದ ಉಪಕಾರ, ಬೇರೆಯವರಿಂದ ನಮಗಾದ ಅಪಕಾರ ಮರೆಯಬೇಕೆಂದು ತಿಳಿಸಿದರು.

ಓಂಕಾರ ಗಿರಿ ಮಠದ ಶ್ರೀ ಫಕೀರೇಶ್ವರ ಪಟ್ಟಾಧ್ಯಕ್ಷರು ಆಶೀರ್ವಚನ ನೀಡಿ, ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ಇದ ನ್ನೇ ಶ್ರೀ ವೀರಪ್ಪಜ್ಜ ನವರು ತಮ್ಮ ವೇದ ವಾಕ್ಯದಲ್ಲಿ ತಿಳಿಸಿದ್ದಾರೆ.ಇದನ್ನುಅರ್ಥಮಾಡಿಕೊಂಡವರು ಜೀವನದಲ್ಲಿ ಗೆದ್ದಂತೆ. ಶ್ರೀ ವೀರಪ್ಪಜ್ಜ ನವರು ತಮ್ಮನ್ನು ತಾವು ಸುಟ್ಟುಕೊಂಡು ಈ ಜಗತ್ತಿಗೆ ಬೆಳಕು ನೀಡಿದ ಮಹಾ ಮಹಿರು ಎಂದರು.

ಸಾನಿಧ್ಯ ವಹಿಸಿದ್ದ ಕಪೋತಗಿರಿಯ ಶ್ರೀ ಶಿವಕುಮಾರ ಸ್ವಾಮಿಗಳು ಆಶೀರ್ವಚನ ನೀಡಿ, ಶ್ರೀ ವೀರಪ್ಪಜ್ಜ ನವರು ಹುಚ್ಚರಲ್ಲ. ಅವರನ್ನು ಹುಚ್ಚರೆಂದು ಕರೆಯುತ್ತಿರುವ ನಾವುಗಳು ಹುಚ್ಚರು. ಸಂಸಾರದ ಹಿಂದೆ ಬಿದ್ದು ಆಧ್ಯಾತ್ಮ ಮರೆತು ಬಾಳುತ್ತಿರುವ ನಾವುಗಳು ಮೂಢರು. ಪುರಾಣ ಶ್ರವಣ ದಿಂದ ಜ್ಞಾನ ಸಿಗುತ್ತದೆ. ಅದರಲ್ಲಿಯೂ ಶ್ರೀ ವೀರಪ್ಪಜ್ಜ ನವರ ಪುರಾಣ ಖಂಡಿತ ನಿಮ್ಮ ಬಾಳಿಗೆ ಬೆಳಕು ನೀಡುತ್ತದೆ. ನಿತ್ಯವೂ ಕೇಳಿ ಬಾಳಿಗೆ ಬೆಳಕು ತಂದು ಕೊಳ್ಳಿರಿ ಶ್ರೀ ವೀರಪ್ಪಜ್ಜ ನವರಿಂದ ನರೇಗಲ್ಲ ಮತ್ತು ಕೋಡಿಕೊಪ್ಪಕ್ಕೆ ಈ ನಾಡಿನಲ್ಲಿ ದೊಡ್ಡ ಹೆಸರಿದೆ. ವೀರಪ್ಪಜ್ಜ ನವರ ಜ್ಞಾನ ಪ್ರಸಾದ, ಅನ್ನ ಪ್ರಸಾದ ಸ್ವೀಕರಿಸಿ ನೀವುಗಳೆಲ್ಲರೂ ಪುಣ್ಯ ವಂತರಾಗಿರಿ ಎಂದರು.

ರೋಣ ಬೂದೀಶ್ವರ ಮಠದ ಡಾ, ವಿಶ್ವನಾಥ ಸ್ವಾಮಿಗಳು ಪುರಾಣ ಪ್ರಾರಂಭಿಸಿದರು. ಚಿಕ್ಕಮನ್ನಾಪುರದ ಹನುಮಂತ ಮೇಟಿ ಸಂಗೀತ ಮತ್ತು ಬರದೂರಿನ ಶಾಂತ ಕುಮಾರ ಹಿರೇಮಠ ತಬಲಾ ಸಾಥ್ ನೀಡಿ-ದರು. ಪುಣ್ಯಾರಾಧನೆ ಶತಮಾನೋತ್ಸವಕ್ಕೆ ದಾನ ನೀಡಿದ ಮಹನೀಯರುಗಳನು ಸನ್ಮಾನಿಸಲಾಯಿತು. ಕನಕದಾಸ ಸಮಿತಿಯ ರವಿ ದಂಡಿನ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಈಸಮಯದಲ್ಲಿಕಾರ್ಯಕ್ರಮದಲ್ಲಿಕುಕನೂರಿನ ಗುದ್ದೆಪ್ಪ ಮಠದ ಸ್ವಾಮಿಗಳು, ಟ್ರಸ್ಟ್ ಕಮಿಟಿ ಅಧ್ಯಕ್ಷ ಡಾ, ಎಂ.ಸಿ. ಚಪ್ಪನ್ನಮನ, ನಿವೃತ್ತ ಶಿಕ್ಷಕ ಎಂ.ಎ ಹಿರೆವಡೆಯರ ಉಪಸ್ಥಿತರಿದ್ದರು ಡಾ, ಕಲ್ಲಯ್ಯ ಹಿರೇಮಠ ನಿರೂಪಿಸಿದರು. ನಿವೃತ್ತ ಪ್ರಾ ಬಿ.ಆರ್ ಜಾಲೀಹಾಳ ಸ್ವಾಗತಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ. ರೋಣ.ಗದಗ**

## ಕೆ.ಆರ್.ಎಸ್ ಪಕ್ಷದ ರೈತ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಿರುಪಾದಿ.ಕೆ ಗೋಮರ್ಸಿ ನೇಮಕ

**ಸಿಹಿ ಕಹಿ ಸುದ್ದಿ**

**ಬೆಂಗಳೂರು** : ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ರೈತ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನಿರುಪಾದಿ. ಕೆ ಗೋಮರ್ಸಿ ಅವರನ್ನು ನೇಮಕ ಮಾಡಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್ ಅವರು ಆದೇಶ ಹೊರಡಿಸಿದ್ದಾರೆ.



ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಬೆಂಗಳೂರಿನ ಪಕ್ಷದ ಕೇಂದ್ರ ಕಚೇರಿಯಲ್ಲಿಆದೇಶಪತ್ರಸ್ವೀಕರಿಸಿ ಮಾತನಾಡಿದ ನಿರುಪಾದಿ.ಕೆ ಗೋಮರ್ಸಿ ಕೆ.ಆರ್.ಎಸ್ ಪಕ್ಷವೂ ನನ್ನ ಮೇಲೆ ನಂಬಿಕೆಯನಿಟ್ಟು ಈಗಾಗಲೇ ಹಲವಾರು ಜವಾಬ್ದಾರಿಗಳನ್ನ ಕೊಟ್ಟಿದ್ದು ಇನ್ನೂ ಹೆಚ್ಚಿನ ಜವಾಬ್ದಾರಿಯಾಗಿ ರೈತ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದೆ, ನನ್ನ ನಿತ್ಯ ನಿರಂತರ ಬಡವರ, ಹಿಂದುಳಿದವರ, ರೈತರ ಸಮಾಜಿಕ ಸೇವೆಯನ್ನು ಮತ್ತು ಸಂಘಟನಾ ಶಕ್ತಿಯನ್ನು ಗುರುತಿಸಿ ಈ ಅವಕಾಶ ನೀಡಿ-ದ್ದಕ್ಕಾಗಿ ಕೆ.ಆರ್ಎಸ್ ಪಕ್ಷದ ರಾಜ್ಯ ಸಮಿತಿಯ ಎಲ್ಲಾ ಪದಾಧಿಕಾರಿಗಳಿಗೆಧನ್ಯವಾದಗಳು ಎಂದು ತಿಳಿಸಿದರು. ಸ್ವಚ್ಛ, ಪ್ರಾಮಾಣಿಕ, ಪ್ರಾದೇಶಿಕ, ಜನಪರ ರಾಜಕಾರಣಕ್ಕಾಗಿ ಹಲವಾರು ವರ್ಷಗಳಿಂದ ಅನ್ಯಾಯ, ಅಕ್ರಮ, ಭ್ರಷ್ಟಾಚಾರ,ದಬ್ಬಾಳಿಕೆದೌರ್ಜನ್ಯದ ವಿರುದ್ಧ ನಿತ್ಯ ನಿರಂತರವಾಗಿ ಹೋರಾಟ ಮಾಡುತ್ತಿರುವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ನಾಡಿನಾದ್ಯಂತ ರೈತರ ಸಮಸ್ಯೆಗಳು, ಕುಂದು ಕೊರತೆಗಳ ನಿವಾರಣೆಗಾಗಿ ಹಾಗೂ ರೈತರ ಶ್ರೇಯೋಭಿವೃದ್ಧಿಯ ಉಳಿವಿಗಾಗಿ ಪಕ್ಷವು ಈಗಾಗಲೇ ರಾಜ್ಯ ರೈತ ಘಟಕದಿಂದ ಹಲವಾರು ಹೋರಾಟಗಳು,ಅಭಿಯಾನಗಳು, ಕಾರ್ಯಕ್ರಮಗಳನ್ನಹಮ್ಮಿಕೊಂಡಿದ್ದು. ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ದಿಂದ ಸಿಗಬೇಕಾದ ಮೂಲಭೂತ ಸೇವಾ ಮತ್ತು ಸೌಲಭ್ಯಗಳು, ಯೋಜನೆಗಳು ಸಿಗದಂತಾಗಿದ್ದು ಅವುಗಳು ಮಧ್ಯವರ್ತಿಗಳ ಪಾಲಾಗುತ್ತಿವೆ. ಅಧಿಕಾರಿವರ್ಗದವರುಸಹರೈತರ ಬಗ್ಗೆ ಕಿಂಚಿತ್ತು ಕಾಳಜಿ ವಹಿಸದೆ ಅವರ ಮೇಲೆ ನಾನಾ ರೀತಿಯ ದಬ್ಬಾಳಿಕೆ, ದೌರ್ಜನ್ಯಗಳು ನಡೆಸಿದಂತ ಉದಾಹರಣೆಗಳು ಕಂಡುಬಂದಿದ್ದು. ಇನ್ನೂಮುಂದೆ ರಾಜ್ಯಾದ್ಯಂತ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ರೈತರ ಪರವಾದ ಅಭಿಯಾನಗಳನ್ನ, ಕಾರ್ಯಕ್ರಮಗಳನ್ನ, ಹೋರಾಟಗಳನ್ನ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು. ರಾಜಾದ್ಯಂತ ರೈತರಿಗೆ ಯಾವುದೇ ಸಮಸ್ಯೆಗಳಾದಲ್ಲಿ ಕೆ.ಆರ್.ಎಸ್ ಪಕ್ಷದ ರೈತ ಸಹಾಯವಾಣಿ 7676791041 ಗೆ ಸಂಪರ್ಕಿಸುವಂತೆ ತಿಳಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ, ದೀಪಕ್ ಸಿ ಎನ್, ರಾಜ್ಯ ಸಂಘಟನಾ ಕಾರ್ಯದರ್ಶಿ ಹಬೀಬ್, ಎಸ್ಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಮಾಯ ಗಣೇಶ್ ಸೇರಿದಂತೆ ಇನ್ನೂ ಅನೇಕರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ**

## ಮೆಡಿಕಲ್ ಕಾಲೇಜಿನಲ್ಲಿ ಮೃತಶರೀರ ಆಧಾರಿತ ನರಶಸ್ತ್ರಚಿಕಿತ್ಸಾ ಕಾರ್ಯಾಗಾರ

**ಬಾಗಲಕೋಟೆ :** ಜನವರಿ 25, 26 ಮತ್ತು 27 ರಂದು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೃತದೇಹಗಳ ಮೇಲಿನ ನರಶಸ್ತ್ರ ಚಿಕಿತ್ಸೆಯ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.





ಮಹಾವಿದ್ಯಾಲಯದ ಶರೀರ ರಚನಾಶಾಸ್ತ್ರ ವಿಭಾಗ, ಇ.ಎನ್.ಟಿ ವಿಭಾಗ ಮತ್ತು ನಿಸಲ್ (ನ್ಯೂರಲ್ ಇಂಟಿಗ್ರಿಟಿ ಸರ್ಜಿಕಲ್ ಸ್ಕಿಲ್ ಲ್ಯಾಬ್) ಸಹಯೋಗದಲ್ಲಿ ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದಲ್ಲಿ ಮಹಾವಿದ್ಯಾಲಯಕ್ಕೆ ದಾನವಾಗಿ ಪಡೆದ ಮೃತದೇಹಗಳ ಮೇಲೆ ನರಶಸ್ತ್ರಚಿಕಿತ್ಸಾ ವಿಧಾನಗಳ ಕುರಿತು ದೇಶದ ವಿವಿಧ ಭಾಗಗಳಿಂದ ಆಗಮಿಸಿದ ನರಶಸ್ತ್ರಚಿಕಿತ್ಸಾ ತಜ್ಞರಿಗೆ ತರಬೇತಿ ನೀಡಲಾಯಿತು.

ಶಸ್ತ್ರಚಿಕಿತ್ಸೆ ಅತ್ಯಂತ ಕ್ಲಿಷ್ಟಕರವಾದ ಪ್ರಕ್ರಿಯೆ. ನರಗಳ ಶಸ್ತ್ರಚಿಕಿತ್ಸೆಯಲ್ಲಿ ಹೆಚ್ಚಿನ ಪರಿಣಿತಿಯ ಅಗತ್ಯವಿದೆ. ಶಸ್ತ್ರಚಿಕಿತ್ಸೆಯನ್ನು ಸುಲಭಸಾಧ್ಯವಾಗಿಸಲು ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸೆ ಮೂಲಕ ವೈದ್ಯರಿಗೆ/ಶಸ್ತ್ರಚಿಕಿತ್ಸಾ ತಜ್ಞರಿಗೆ ತರಬೇತಿಯನ್ನು ನೀಡಲಾಗುತ್ತದೆ. ಕಾರ್ಯಾಗಾರದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ 20 ಕ್ಕೂ ಹೆಚ್ಚು ನರಶಸ್ತ್ರಚಿಕಿತ್ಸಾ ತಜ್ಞರು ತರಬೇತಿಯನ್ನು ಪಡೆದರು.

'ನರಶಸ್ತ್ರಚಿಕಿತ್ಸೆಯಲ್ಲಿ ತರಬೇತಿಯ ಅಗತ್ಯವಿದೆ. ಇಂಥ ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸಾ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವುದರಿಂದ ತರಬೇತಿಯ ಜೊತೆಗೆ ಶಸ್ತ್ರಚಿಕಿತ್ಸಾ ತಜ್ಞರಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ' ಎಂದು ಶಿಬಿರಾರ್ಥಿ ವೈದ್ಯರೊಬ್ಬರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ.ಮಾನಸ್‌ಕುಮಾರ ಪಾಣಿಗ್ರಹಿ, ಡಾ.ನರೇಶ ಬಿಯಾನಿ, ಡಾ.ಸಂಜೀವ ಕೊಳಗಿ, ಡಾ.ಅಜಯ ಹೆರೂರ, ಡಾ.ನಿಶಿತ್ ಶಹ, ಡಾ.ಮಾಲಿಪಾಟೀಲ, ಡಾ.ಸಿ.ಎಸ್.ಹಿರೇಮಠ ಮತ್ತು ಡಾ.ಸುಶಿನ್ ದತ್ತ ಸಂಪನ್ಮೂಲ ವೈದ್ಯರಾಗಿ ಕಾರ್ಯಾಗಾರದಲ್ಲಿ ಶಸ್ತ್ರಚಿಕಿತ್ಸಾ ತಜ್ಞರಿಗೆ ತರಬೇತಿಯನ್ನು ನೀಡಿದರು. ಎಚ್.ಆರ್.ಎಸ್ ನೆವಿಗೇಷನ್, ಇಂಟಾಸ್, ಮ್ಯಾಕ್‌ಟ್ರಾನಿಕ್ಸ್, ಮೆಡ್‌ಟ್ರಾನಿಕ್ಸ್, ಶಲ್ಯ, ಬ್ರೌನ್ ಇತ್ಯಾದಿ ವೈದ್ಯಕೀಯ ಉಪಕರಣಗಳ ಸಂಸ್ಥೆಗಳು ಕಾರ್ಯಾಗಾರದಲ್ಲಿ ಶಸ್ತ್ರಚಿಕಿತ್ಸೆಗೆ ಅಗತ್ಯವಾದ ಉಪಕರಣಗಳನ್ನು ಒದಗಿಸಿದವು. ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸ ಮೂಲಕ ತರಬೇತಿ ನೀಡಲು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಅನಾಟಮಿ ವಿಭಾಗದಲ್ಲಿ 25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೃತಶರೀರ ಆಧಾರಿತ ಶಸ್ತ್ರಚಿಕಿತ್ಸಾ ಕೌಶಲ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ. ಅತ್ಯಂತ ಸುಸಜ್ಜಿತ ಪ್ರಯೋಗಾಲಯ ಇದಾಗಿದ್ದು ವಿವಿಧ ಪ್ರಕಾರದ ಶಸ್ತ್ರಚಿಕಿತ್ಸೆ ತರಬೇತಿಯನ್ನು ನೀಡಲು ಅಗತ್ಯವಾದ ಎಲ್ಲ ಪ್ರಕಾರದ ಸೌಲಭ್ಯಗಳನ್ನು ಒಳಗೊಂಡಿದೆ. ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸ್ಥಾಪನೆಯಾದ ಮೃತಶರೀರ ಶಸ್ತ್ರಚಿಕಿತ್ಸಾ ಪ್ರಯೋಗಾಲಯ ಉತ್ತರ ಕರ್ನಾಟಕದಲ್ಲಿ ಮೊದಲನೆಯದ್ದು ಎನ್ನುವುದು ಹೆಮ್ಮೆಯ ಸಂಗತಿ.

ಮಹಾವಿದ್ಯಾಲಯದ ಶರೀರ ರಚನಾಶಾಸ್ತ್ರ ವಿಭಾಗದ ವೈದ್ಯರು ಆವಿಷ್ಕರಿಸಿರುವ ವಿಶೇಷ ದ್ರಾವಣದಿಂದ ಮೃತ ದೇಹಗಳನ್ನು ಮತ್ತು ಅವುಗಳ ಅಂಗಾಂಗಗಳನ್ನು ಜೀವಂತ ವ್ಯಕ್ತಿಯಲ್ಲಿರುವಂತೆಯೇ ಕಾಯ್ದಿಡುವ ವಿಶೇಷ ವ್ಯವಸ್ಥೆ ಇದೆ. ಜೊತೆಗೆ ಮೃತ ದೇಹದ ಮೆದುಳಿನಲ್ಲಿ ಕೃತಕ ದ್ರವವನ್ನು (ಸಿ.ಎಸ್.ಎಫ್) ಸಂಚರಿಸುವಂತೆ ಮಾಡಿ ಮೃತದೇಹದ ಮೆದುಳನ್ನು ಸಂರಕ್ಷಿಸಿಡಲಾಗುತ್ತಿದೆ. ಮೃತದೇಹದಮೆದುಳಿನಲ್ಲಿಕೃತಕದ್ರವಸಂಚಾರ ಮಾಡುವ ಈ ಪ್ರಕಾರದ ಸಂಶೋಧನೆಯು ಭಾರತದಲ್ಲೇ ಪ್ರಥಮ ಹಾಗೂ ಜಗತ್ತಿನಲ್ಲಿ ಎರಡನೆಯದಾಗಿದೆ.

ಇಂಥದ್ದೊಂದು ವಿಶಿಷ್ಠ ಕಾರ್ಯಾಗಾರವನ್ನು ಆಯೋಜಿಸಿದ ಅನಾಟಮಿ ಮತ್ತು ಇ.ಎನ್.ಟಿ ವಿಭಾಗದ ವೈದ್ಯ ಸಿಬ್ಬಂದಿಯನ್ನು, ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿ ನೀಡಿದ ವೈದ್ಯರನ್ನು ಮತ್ತು ಉಪಕರಣಗಳನ್ನು ಒದಗಿಸಿದ ಸಂಸ್ಥೆಗಳನ್ನು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ ಮತ್ತು ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಅಭಿನಂದಿಸಿರುವರು.

## ಮಾನ್ವಿಯಲ್ಲಿ ಸೈಯದ್ ಆರೀಫ್ ಖಾದ್ರಿ ಸಾಹೇಬ್‌ರ ಹುಟ್ಟು ಹಬ್ಬದ ಆಚರಣೆ



ಸಿಹಿ ಕಹಿ ಸುದ್ದಿ

ಮಾನ್ವಿ : ತಾಲೂಕ ಗೌಸ್ ಓ ಖ್ವಾಜಾ ಅಂಜುಮನ್ ಕಮಿಟಿ ಅಧ್ಯಕ್ಷ ಸೈಯದ್ ಆರೀಫ್ ಖಾದ್ರಿ ಸಾಹೇಬ್ ಹುಟ್ಟು ಹಬ್ಬವನ್ನು ಆಡಂಬರ ದಿಂದ ಆಚರಿಸಬಹುದಾಗಿತ್ತು. ಆದ-ರೆ ಬಡವರ ಪರವಾಗಿ ನೊಂದವರಿಗೆ ಸಹಾಯ ಮಾಡುವ ವ್ಯಕ್ತಿ ಯಾಗಿದ್ದ-ರಿಂದ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದಾರೆಂದು ಜನಸೇವಾ ಫೌಂಡೇಶನ್ ರಾಜ್ಯಾಧ್ಯಕ್ಷ ಜಾವೀದ್ ಖಾನ್ ತಿಳಿಸಿದರು. ರಾಯಚೂರು ಜಿಲ್ಲೆಯ ಮಾನ್ವಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ನೆರಳು ಅನಾಥಶ್ರಮ ಹಾಗು ಅಂ-ಧ ಮಕ್ಕಳಿಗೆ ಅಂಜುಮನ್ ಕಮಿಟಿ ಆಯೋಜಿಸಿದ್ದ ಹಣ್ಣು ಹಂಪಲು ವಿತರಿಸುವ ಮೂಲಕ ಮಾತನಾಡಿದರು. ಸೈಯದ್ ಆರೀಫ್ ಖಾದ್ರಿ ಅವರು ಬಡವರು ಅಭಿವೃದ್ಧಿಯಾಗ ಬೇಕು ಎಂದು ಮೆಹಂದಿ ತರಬೇತಿ, ಹೊಲಿಗೆ ಯಂತ್ರ ತರಬೇತಿ ಸೇರಿದಂತೆ ನಾನಾ ಕಾರ್ಯಕ್ರಮಗಳನ್ನು ಮಾಡಿದ ಉದಾಹರಣೆ ಇದೆ. ಹೀಗಾಗಿ ಸೈಯದ್ ಆರೀಫ್ ಖಾದ್ರಿಗೆ ಆ ದೇವರು ಆಯಸ್ಸು ಆರೋಗ್ಯ ಕೊಡುವ ಮೂಲಕ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮ ಮಾಡಲಿ ಎಂದು ಆಶಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪ್ರಗತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನೂತನ ಶಾಖೆ ಉದ್ಘಾಟನೆ

**ಲೋಕಾಪುರ :** ಸಹಕಾರ ಮತ್ತು ಸೌಹಾರ್ದ ಕ್ಷೇತ್ರದಲ್ಲಿ ಸಹಕಾರ, ಸಹಯೋಗ, ಸೌಹಾರ್ದತೆಯ ಭಾವನೆಗಳಿರುತ್ತವೆ, ಸಹಕಾರ ಸೌಹಾರ್ದ ಸಂಸ್ಥೆಗಳು ನಿಸ್ವಾರ್ಥದಿಂದ ಕೆಲಸ ಮಾಡುತ್ತಿರುವುದರಿಂದ ಇಂತಹ ಸಂಸ್ಥೆಗಳು ಜನಸಾಮಾನ್ಯರ ಉನ್ನತಿಗೆ ಆಧಾರಸ್ತಂಭವಾಗುತ್ತಿವೆ ಎಂದು ಹಾರೋಗೇರಿಯ ಶರಣ ವಿಚಾರ ವಾಹಿನಿ ಅಧ್ಯಕ್ಷ ಆಯ್.ಆರ್.ಮಠಪತಿ ಹೇಳಿದರು.

ಪಟ್ಟಣದಲ್ಲಿ ಹಾರೂಗೇರಿಯ ಪ್ರಗತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ನೂತನ 8 ನೇ ಶಾಖೆಯನ್ನು ಲೋಕಾಪುರ ಪಟ್ಟಣದಲ್ಲಿ ಉದ್ಘಾಟಿಸಿ,

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಪ್ರಗತಿ ಸೌಹಾರ್ದ ಸಂಘವು ವಿವಿಧ ಕ್ಷೇತ್ರಗಳಲ್ಲಿ ಜನ ಸಾಮಾನ್ಯರಿಗೆ ಅಪಾರ ಕೊಡುಗೆ ನೀಡಿದ್ದಾರೆ, ಅದರ ಭಾಗವಾಗಿ ಲೋಕಾಪುರದಲ್ಲಿ ಆರಂಭವಾದ ಶಾಖೆಯು ಇಲ್ಲಿನ ರೈತರಿಗೆ ಮತ್ತು ನಿರ್ಗತಿಕರಿಗೆ, ವ್ಯಾಪಾರಸ್ಥರಿಗೆ ಆರ್ಥಿಕ ನೆರವು ನೀಡಲು ಉಪಯುಕ್ತವಾಗಲಿದೆ ಎಂದರು.

ಕಲ್ಮಡ ಲಕ್ಷಾನಟ್ಟಿಯ ಬಸವಪ್ರಭು ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಸಹಕಾರ ವಲಯವು ಪ್ರಸ್ತುತ ಜನರ ಬಹುತೇಕ ಬೇಡಿಕೆಗಳನ್ನು ಪೂರೈಸುವ ಮಹತ್ವದ ವ್ಯವಸ್ಥೆಯಾಗಿ ಕೆಲಸ ಮಾಡುತ್ತಿದೆ, ಸಹಕಾರ ಕ್ಷೇತ್ರದ ಭಾಗವಾಗಿ ಎರಡು ದಶಕದಿಂದ ಆರಂಭವಾದ ಸೌಹಾರ್ದ ವ್ಯವಸ್ಥೆ ಇದೀಗ ಹೆಚ್ಚಿನ ವೇಗ ಪಡೆದುಕೊಂಡಿದೆ ಎಂದರು.



ಸಂಘದ ಸಂಸ್ಥಾಪಕ ಬಿ.ವ್ಹಿ.ಬಿರಾದಾರ ಮಾತನಾಡಿ ಅಲ್ಪಾವಧಿಯಲ್ಲಿ ಸಂಸ್ಥೆ ಅಧಿಕ ಠೇವಣಿ ಹೊಂದಿದ್ದು, ಉತ್ತಮ ಬೆಳವಣಿಗೆಯತ್ತ ಸಾಗುತ್ತಿದೆ, ವಿಶೇಷವಾಗಿ ರೈತರಿಗೆ ಸಂಸ್ಥೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು,

ಲೋಕಾಪುರ ಶಾಖೆಯೂ ಕೂಡ ಎಲ್ಲರ ನೆರವಿನಿಂದ ಉತ್ತಮ ಬೆಳವಣಿಗೆ ಕಾಣಲಿದೆ ಎಂಬ ವಿಶ್ವಾಸವಿದೆ, ವಿವಿಧ ಸ್ಥಳಗಳಲ್ಲಿರುವ ಸಂಘದ ಶಾಖೆಗಳು ಉತ್ತಮ ಏಳ್ಗೆ ಕಂಡಿದ್ದು ಬಡವರಿಗೆ,

ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಲೆನ್ನುವ ಉದ್ದೇಶದಿಂದ ಈ ಸಹಕಾರಿ ಸಂಘವನ್ನು ಆರಂಭಿಸಲಾಗಿದೆ ಇದರ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಲು ಮನವಿ ಮಾಡಿದರು.

ಸದಸ್ಯರ ಠೇವಣೆಗಳನ್ನು ಗಣ್ಯರು ಈ ವೇಳೆ ವಿತರಿಸಿದರು. ವೇದಿಕೆಯಲ್ಲಿ ಡಾ. ಎಂ.ವಾಯ್.ಕಟ್ಟಿ, ಶಾಖಾ ಆಡಳಿತ ಮಂಡಳಿ ಅಧ್ಯಕ್ಷ ತಿಪ್ಪಣ್ಣ ಪಾಟೀಲ, ಗಿರೀಶ ಕೊಪ್ಪದ, ಲೋಕಣ್ಣ ಪಾಟೀಲ ವೆಂಕಣ್ಣ ಕತ್ತಿ, ವೆಂಕಪ್ಪ ಕೆಂಚರಡ್ಡಿ, ನಿಂಗಣ್ಣ ಮುದ್ದಾಪುರ, ಹಣಮಂತ ಚಿಚಖಂಡಿ, ಪಾಂಡು ಅರಕೇರಿ, ಸದಾಶಿವ ಹಣಮನ್ನವರ, ಹಣಮಮತ ಪಡಮೂಲಿ, ಭೀಮಪ್ಪ ಕೆಂಚರಡ್ಡಿ, ಬಾಲನಗೌಡ ಪಾಟೀಲ, ಶಾಖಾ ಸಲಹಾ ಮಂಡಳಿಯ ವೆಂಕಣ್ಣ ಪಾಟೀಲ, ರವಿ ಪಾಟೀಲ, ಪ್ರಲ್ಹಾದ ಶಿರೂರ, ಯಲ್ಲಪ್ಪ ಕಿವಡಿ, ಭೀಮನಗೌಡ ಪಾಟಿಲ, ನೈರುತ್ಯ ಪರಪ್ಪನವರ, ಬಸಲಿಂಗಪ್ಪ ಕಟ್ಟಿ ಹಾಗೂ ಶಾಖಾ ವ್ಯವಸ್ಥಾಪಕ ಮಂಜುನಾಥ ಪಾಟೀಲ ಆಡಳಿತ ಮಂಡಳಿ ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಇದ್ದರು.

# ತಲೆಗೆ ಬಿಳುವ ಅಕ್ಷರಗಳಿಗಿಂತ ಎದೆಗೆ ಬೀಳುವ ಅಕ್ಷರ ಮುಖ್ಯ: ಜಿ.ಎಸ್.ಅಡವಿ




**ಇಳಕಲ್ :** ಮಕ್ಕಳಿಗೆ ಮೌಲ್ಯವರ್ಧಿತ ಶಿಕ್ಷಣವನ್ನು ಕೊಡುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಆದರೆ ಇಂದಿನ ಶಿಕ್ಷಣಬಹುಪಾಲುವ್ಯಾಪಾರಿಕರಣವಾಗಿದ್ದು ಮಕ್ಕಳಿಗೆ ಉತ್ತಮವಾದ ಶಿಕ್ಷಣದ ಕೊರತೆ ಉಂಟಾಗಿದೆ ಹಾಗೂ ಮಕ್ಕಳಿಗೆ ಕೇವಲ ಪರೀಕ್ಷೆಗೆ ಪಾಸ್ ಆಗುವಂತೆ ತಯಾರು ಮಾಡುತ್ತಿದ್ದು ಅಕ್ಷರಗಳು ಕೇವಲ ತಲೆಗೆ ಇಳಿಯದೆಅಕ್ಷರಗಳುಎದೆಗೆಇಳಿದಾಗಮಾತ್ರ ಮೌಲ್ಯಯುತ ಶಿಕ್ಷಣ ನೀಡಿದಂತಾಗುತ್ತದೆ ಎಂದು ಪ್ರಭಾರ ಮುಖ್ಯೋಪಾಧ್ಯಾಯ ಜಿ.ಎಸ್.ಅಡವಿ ಹೇಳಿದರು.

ನಗರದ ಹೆಮ್ಮೆಯ ಶಿಕ್ಷಣ ಸಂಸ್ಥೆ ಬಸವೇಶ್ವರ ಶಿಕ್ಷಣ ಸಮಿತಿಯ ಬಸವೇಶ್ವರ ಕನ್ನಡ ಮಾಧ್ಯಮ ಶಿಶುವಿಹಾರ ಹಾಗೂ ಹಿರಿಯ ಪ್ರಾಥಮಿಕ ಶಾಲೆ 2024-25 ನೇಸಾಲಿನ ಪ್ರತಿಭಾ ಪುರಸ್ಕಾರ ಹಾಗೂ 30ನೇ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಜಿ.ಎಸ್.ಅಡವಿ ಮಾತನಾಡುತ್ತಾ ವಿದ್ಯಾರ್ಥಿಗಳು ನಾಡಿನ ಒಳ್ಳೆಯ ಪ್ರಜೆಗಳಾಗಬೇಕಾದರೆ ತಂದೆ-ತಾಯಿ,ಗುರುಗಳು ಮತ್ತು ಹಿರಿಯರನ್ನು ಗೌರವದಿಂದ ಕಾಣಬೇಕೆಂದರು.

ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪರಮಪೂಜ್ಯ ಗುರುಮಹಾಂತ ಶ್ರೀಗಳು ಮಕ್ಕಳಿಗೆ ಗುರು ಹಿರಿಯರನ್ನು ಕಂಡರೆ ಗೌರವಿಸುವಂತೆ ಮನೆಯಲ್ಲಿರುವ ಪಾಲಕರು ಹೇಳಿಕೊಡಬೇಕು ಇದರಿಂದ ಮುಂದೆ ಮಕ್ಕಳು ಉತ್ತಮ ದಾರಿಯನ್ನು ಹಿಡಿದು ಸಮಾಜಕ್ಕೆ ಕೊಡುಗೆಯನ್ನು ನೀಡುತ್ತಾರೆ ಹಾಗೂ ಗುರುಗಳನ್ನು ಹಾಗೂ ತಂದೆ ತಾಯಿಯನ್ನು ಗೌರವಿಸುತ್ತಾರೆ ಎಂದು ಪೂಜ್ಯರು ತಮ್ಮ ಆಶೀರ್ವಚನದಲ್ಲಿ ಹೇಳಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿಜೇತ ವಿದ್ಯಾರ್ಥಿಗಳಿಗೆ ಸಮಿತಿಯ ಕಾರ್ಯದರ್ಶಿ ರಾಜೇಶ್ವರಿ ಹಂಚಾಟೆ, ಮಹಾಂತೇಶ ಗೊರಜನಾಳ, ಮಲ್ಲಿಕಾರ್ಜುನ ಅಂಗಡಿ, ಜಿ.ಎಸ್. ಗೌಡರ(ಗೊರಬಾಳ), ಬಿ.ಎಸ್.ಸಜ್ಜನ, ಗಿರಿರಾಜಗೌಡ ಪಾಟೀಲ, ಮೊದಲಾದವರು ಬಹುಮಾನದೊಂದಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ದಿವ್ಯಸಾನಿಧ್ಯವಹಿಸಿದ ಪೂಜ್ಯ ಗುರುಮಹಾಂತ ಶ್ರೀಗಳನ್ನು ಮುಖ್ಯಅತಿಥಿ ಅಡವಿ, ಡಾ.ಮಹೇಶ ಹಂಚಾಟೆ ದಂಪತಿಗಳನ್ನು ಶಾಲೆಯಲ್ಲಿ ಕಲಿತು ಉನ್ನತ ಹುದ್ದೆಯನ್ನು ಏರಿದ ಸುಮೀತ ರಾಯಬಾಗಿ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ಸಮಿತಿಯ ಕಾರ್ಯಧ್ಯಕ್ಷ ಮಲ್ಲಿಕಾರ್ಜುನ ಅಗ್ನಿಅಧ್ಯಕ್ಷತೆವಹಿಸಿದ್ದರು,ಸವಿತಾಹೂಗಾರ ಹಾಗೂ ಸಂಗಡಿಗರಿಂದ ಪ್ರಾರ್ಥನೆ, ಸಿದ್ದು ಕೊಪ್ಪದ ಸ್ವಾಗತಿಸಿದರು, ಅನುರಾಧ ಸನ್ನಿ ಪರಿಚಯಿಸಿದರು, ಜಗದೀಶ ಹುನಗುಂದ ಪ್ರಾಸ್ತಾವಿಕವಾಗಿ ಮಾತನಾಡಿದರು, ಲಕ್ಷ್ಮೀ ಬಿಂಜವಾಡಗಿ ವರದಿ ವಾಚಿಸಿದರು, ಜ್ಯೋತಿ ಚಲವಾದಿ ನಿರೂಪಿಸಿದರು, ರಂಜಾನಬಿ ನದಾಫ ವಂದಿಸಿದರು. ವಿದ್ಯಾರ್ಥಿಗಳಿಂದ ವಿವಿಧ ಮನರಂಜನೆ ಕಾರ್ಯಕ್ರಮಗಳು ನೋಡುಗರ ಕನ್ಮಣ ತನಿಸುವಂತಿದ್ದವು.

# ಬೆಂಬಲ ಬೆಲೆಯಲ್ಲಿ ಕಡಲೆಕಾಳು ಖರೀದಿ

**ಬಾಗಲಕೋಟೆ :** ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಕಡಲೆಕಾಳು ಪ್ರತಿ ಕ್ವಿಂಟಾಲ್‌ಗೆ 5,650 ರೂ.ಗಳಂತೆ ಪ್ರತಿ ಎಕರೆಗೆ 4 ಕ್ವಿಂಟಾಲ್ ಮತ್ತು ಗರಿಷ್ಠ ಪ್ರತಿ ರೈತರಿಂದ 20 ಕ್ವಿಂಟಾಲ್ ಕಡಲೆ ಉತ್ಪನ್ನ ಖರೀದಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಟಾಸ್ಕಪೋರ್ಸ ಸಮಿತಿಯ ಅಧ್ಯಕ್ಷೆ ಜಾನಕಿ ಕೆ.ಎಂ ಹೇಳಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಜಿಲ್ಲಾಧಿಕಾರಿಗಳು ರೈತರ ನೋಂದಣಿ ಕಾರ್ಯವನ್ನು 80 ದಿನಗಳವರೆಗೆ ಮತ್ತು ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಲಾಗಿದೆ. ಖರೀದಿ ಕೇಂದ್ರಗಳಲ್ಲಿ ರೈತರ ಹೆಸರು ನೊಂದಾಯಿಸಿಕೊಳ್ಳಲು ಆಧಾರಕಾರ್ಡ್ ಪ್ರತಿ, ರೈತರಿಗೆ ಸಂಬಂಧಿಸಿದ ಎಫ್‌ಐಡಿ ಸಂಖ್ಯೆ ಹಾಗೂ ಪಹಣಿಯನ್ನು ಸಲ್ಲಿಸಿ ನೋಂದಾಯಿಸಿಕೊಳ್ಳತಕ್ಕದ್ದು. ಕಡಲೆ ಉತ್ಪನ್ನವನ್ನು ಖರೀದಿಸುವ ಪೂರ್ವದಲ್ಲಿ ರೈತರು ನೀಡಿರುವ ವಿವರವನ್ನು ಎನ್.ಸಿ.ಸಿಎಫ್ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ ಇ-ಸಂಯುಕ್ತಿ ತಂತ್ರಾಂಶದೊಂದಿಗೆ ಭೂಮಿ ಯುಡಿಐಡಿಎಐ ಮತ್ತು ಬೆಳೆ ಸಮೀಕ್ಷೆ ದತ್ತಾಂಶದೊಂದಿಗೆ ತಾಳೆ ಮಾಡಿ ಪರಿಶೀಲಿಸಿ ನಂತರವೆ ನೋಂದಾಯಿಸಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಒಂದುವೇಳೆಬೆಳೆದರ್ಶಕದಲ್ಲಿಬೆಳೆಬೆಳೆಯದೆಇರುವದು ಕಂಡು ಬಂದಲ್ಲಿ ಅಂತಹ ರೈತರು ಹತ್ತಿರದ ಕೃಷಿ ಇಲಾಖೆ,ತೊಟಗಾರಿಕೆಇಲಾಖೆ,ರೇಷ್ಮೆಇಲಾಖೆಯನ್ನು ಸಂಪರ್ಕಿಸಿ ಆಕ್ಷೇಪಣೆಯನ್ನು ಸಲ್ಲಿಸಿ ಬೆಳೆ ದರ್ಶಕದಲ್ಲಿ ಬೆಳೆಯನ್ನು ನಮೂದಿಸಿಕೊಂಡ ನಂತರ ಖರೀದಿ ಕೇಂದ್ರದಲ್ಲಿ ನೋಂದಾಯಿಸಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಖರೀದಿ ಕೇಂದ್ರಗಳ ಅಧಿಕಾರಿಗಳನ್ನು ಹಾಗೂ ಶಾಖಾ ವ್ಯವಸ್ಥಾಪಕರನ್ನು (9449864458) ಸಂಪರ್ಕಿಸುವಂತೆ ತಿಳಿಸಿದ್ದಾರೆ.

**ಖರೀದಿ ಕೇಂದ್ರಗಳ ವಿವರ :**
ಬಾಗಲಕೋಟೆ ತಾಲೂಕಿನ ಪಿ.ಕೆ.ಪಿ.ಎಸ್ ಬೆನಕಟ್ಟಿ (9741066862), ಪಿ.ಕೆ.ಪಿ.ಎಸ್ ಹಳ್ಳೂರು (9901325201),ಬಾದಾಮಿತಾಲೂಕಿನಪಿ.ಕೆ.ಪಿ.ಎಸ್ ಬಾದಾಮಿ (9611358837), ಟಿ.ಎ.ಪಿ.ಸಿ.ಎಮ್.ಎಸ್ (9008116746), ಪಿ.ಕೆ.ಪಿ.ಎಸ್ ಕೆರೂರು (9972301729), ಹುನಗುಂದ & ಇಳಕಲ್ಲ ತಾಲೂಕಿನ ಟಿ.ಎ.ಪಿ.ಸಿ.ಎಮ್.ಎಸ್ ಹುನಗುಂದ (9480262655), ನಂದವಾಡಗಿ (9902377067), ಹಿರೇಅದಾಪೂರ (8497876996), ಬೂದಿಹಾಳ (7019825319), ಎಫ್.ಪಿ.ಓ ಸುಳೇಬಾವಿ (9449762433, 9008215922), ಪಿ.ಕೆ.ಪಿ.ಎಸ್ ಮುಗನೂರು (8310324070), ಕೂಡಲಸಂಗಮ (9449357061), ಮುಧೋಳ ತಾಲೂಕಿನ 13. ಟಿ.ಎ.ಪಿ.ಎಂ.ಎಸ್ ಮುಧೋಳ (9242783318), ಎಫ್.ಪಿ.ಓ ಲೋಕಾಪೂರ (9880927310), ಎಫ್.ಪಿ.ಓ ಸರ್ವಬಂದು (9844474344), ಟಿ.ಎ.ಪಿ.ಸಿ.ಎಮ್.ಎಸ್ ಜಮಖಂಡಿ (7019445935), ಎಫ್.ಪಿ.ಓ ತೊದಲಬಾಗಿ (9741998771), ಟಿ.ಎ.ಪಿ.ಸಿ.ಎಮ್.ಎಸ್ ಬೀಳಗಿ (7019682890), ಪಿ.ಕೆ.ಪಿ.ಎಸ್ ಬೀಳಗಿ ಕ್ರಾಸ್ (9880376768).

# ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ

**ಬಾಗಲಕೋಟೆ :** ಜಿಲ್ಲೆಯಾದ್ಯಂತ ಜನವರಿ 30 ರಿಂದ ಫೆಬ್ರವರಿ 13ರ ವರೆಗೆ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಂಜುನಾಥ ಡಿ.ಎನ್ ಹೇಳಿದರು.

ಜಿಲ್ಲಾ ಪಂಚಾಯತ್ ಹಳೆಯ ಸಭಾಂಗಣದಲ್ಲಿ ಬುಧವಾರ ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನ ಕುರಿತ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನವನ್ನು ಯಶಸ್ವಿಗೊಳಿಸುವ ಮೂಲಕ ಜಿಲ್ಲೆಯನ್ನು ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸಲು ಸಂಕಲ್ಪ ತೊಡಬೇಕು ಎಂದು ಹೇಳಿದರು.

ಶಾಲಾ-ಕಾಲೇಜುಗಳಲ್ಲಿ ಸ್ಪರ್ಶ ಕುಷ್ಠರೋಗ ಕುರಿತು ಜಾಗೃತಿ ಮೂಡಿಸಬೇಕು. ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಯು ಈ ಆಂದೋಲನ ಅವಧಿಯಲ್ಲಿ ಮನೆ ಮನೆಗೆ ಭೇಟಿ ನೀಡಿ ರೋಗದ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು. ಕುಷ್ಠ ರೋಗಿಗಳನ್ನು ಪತ್ತೆ ಹಚ್ಚಿ ಅವರಿಗೆ ಚಿಕಿತ್ಸೆ ಕೊಡಿಸಬೇಕು ಎಂದು ತಿಳಿಸಿದರು. ದೇಹದ ಯಾವುದೇ ಭಾಗದಲ್ಲಿ ಸ್ಪರ್ಶಜ್ಞಾನವಿಲ್ಲದ ತಿಳಿ, ಬಿಳಿ ಅಥವಾ ತಾಮ್ರ ಬಣ್ಣದ ಮಚ್ಚೆಗಳಿದ್ದಲ್ಲಿ ಅದು ಕುಷ್ಠರೋಗದ ಲಕ್ಷಣಗಳಾಗಿವೆ ಎಂಬುದರ ಬಗ್ಗೆ ಜನತೆಗೆ ತಿಳಿಸಬೇಕು ಎಂದರು. ಕುಷ್ಠರೋಗಕ್ಕೆ ಬಹುವಿಧ ಔಷಧಿ ಚಿಕಿತ್ಸೆ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತದೆ. ಕುಷ್ಠರೋಗದ ಬಗ್ಗೆ ಯಾರೂ ತಾರತಮ್ಯ ಬೇಧಭಾವ ಮಾಡಬಾರದು. ಕುಷ್ಠರೋಗಿಗಳು ಶಾಪಗ್ರಸ್ಥರಲ್ಲ. ಕಳಂಕಿತರಲ್ಲ ಎನ್ನುವಂತಹ ವಿಷಯಗಳ ಬಗ್ಗೆಜನತೆಗೆತಿಳಿಸಿಮನವರಿಕೆಮಾಡಬೇಕು. ಕುಷ್ಠರೋಗದ ಬಗ್ಗೆ ಜನರಲ್ಲಿರುವ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಬೇಕು. ಕಷ್ಠರೋಗದಿಂದ ಯಾರೂ ಸಹ ಬಾಧಿತರಾಗದಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿ ಗೃಹ ಆರೋಗ್ಯ ಯೋಜನೆಯಡಿಮನೆ-ಮನೆಸರ್ವೇಮಾಡಿ ಅಧಿಕ ರಕ್ತದೊತ್ತಡ, ಡಯಾಬಿಟಿಸ್, ಓರಲ್ ಕ್ಯಾನ್ಸರ್ ಮತ್ತು ಸರ್ವೇಕಲ್ ಕ್ಯಾನ್ಸರಗಳ ಬಗ್ಗೆ ಮಾಹಿತಿ ಪಡೆಯಲಾಗುವುದು ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲಣಾಧಿಕಾರಿ ಡಾ.ಶಿವನಗೌಡ ಪಾಟೀಲ ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಯ ಜನತೆಯಾದ ನಾವು ಮತ್ತು ಜಿಲ್ಲಾಡಳಿತವು ಈ ಮೂಲಕ ನಮ್ಮ ಜಿಲ್ಲೆಯನ್ನು ಕುಷ್ಠರೋಗ ಮುಕ್ತಮಾಡಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತೇವೆಂದು ಘೋಷಿಸುತ್ತೇವೆ. ಸಾಧ್ಯವಾದಷ್ಟು ಮುಂಚೆಯೇ ಎಲ್ಲಾ ಕುಷ್ಠರೋಗ ಪ್ರಕರಣಗಳನ್ನು ಕಂಡುಹಿಡಿಯಲು ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ. ಜಿಲ್ಲೆಯಲ್ಲಿ ಇದನ್ನು ಸಾಧಿಸಲು ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ನಾವು ಬಳಸುತ್ತೇವೆ. ಕುಷ್ಠರೋಗದಿಂದ ಬಳಲುತ್ತಿರುವ ವ್ಯಕ್ತಿಗಳ ಜೊತೆ ನಾವು ಯಾವುದೇ ರೀತಿಯ ತಾರತಮ್ಯ ಮಾಡುವುದಿಲ್ಲ. ಮತ್ತು ಇತರರು ಕೂಡ ತಾರತಮ್ಯ ಮಾಡಲು ಅವಕಾಶ ನೀಡುವುದಿಲ್ಲವೆಂದು ಘೋಷಿಸುತ್ತೇವೆ. ನಾವು ವೈಯಕ್ತಿಕವಾಗಿ ಹಾಗೂ ಒಟ್ಟಾಗಿ ಕುಷ್ಠರೋಗ ಪೀಡಿತ ವ್ಯಕ್ತಿಗಳ ವಿರುದ್ಧ ಕಳಂಕ ಮತ್ತು ತಾರತಮ್ಯ ಕೊನೆಗೊಳಿಸಲು ಕೆಲಸ ಮಾಡುತ್ತೇವೆ. ಮತ್ತು ಅವರುಗಳನ್ನು ಮುಖ್ಯವಾಹಿನಿಗೆ ತರಲು ಸಹಕಾರ ನೀಡುತ್ತೇವೆ ಎಂದು ಸಭೆಯಲ್ಲಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಲಾಯಿತು. ನಂತರಬಿತ್ತಿಪತ್ರಬಿಡುಗಡೆಮಾಡಲಾಯಿತು.

ಈ ಸಂದರ್ಭದಲ್ಲಿ ಡಿ.ಟಿ.ಓ .ಡಾ ಸುವರ್ಣ ಕುಲಕರ್ಣಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ದಯಾನಂದ ಕರೆಣ್ಣವರ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಅರವಿಂದ ಪಟ್ಟಣಶೆಟ್ಟಿ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಶೇಖರಪ್ಪರ ಮುತ್ತೇನವರ್‌ಗೆ ವಿಶ್ವವಾಣಿಯ 'ಗ್ಲೋಬಲ್ ಅಚೀವರ್ಸ್ ಅವಾರ್ಡ್'



**ಕೊಪ್ಪಳ :** ವಿಶ್ವವಾಣಿ ಪತ್ರಿಕೆಯಿಂದ ಕೊಡಮಾಡುವ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ಗೆ ಕೊಪ್ಪಳದ ಉದ್ಯಮಿ ಶೇಖರಪ್ಪ ಮುತ್ತೇನ್ನವರ್ ಆಯ್ಕೆ ಆಗಿದ್ದಾರೆ.

ಬೇರೆಬೇರೆಕ್ಷೇತ್ರಗಳಲ್ಲಿಸಾಧನೆಮಾಡಿರುವ ಸಾಧಕರಿಗೆ ಪ್ರತಿವರ್ಷ ವಿಶ್ವವಾಣಿ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ನೀಡುತ್ತದೆ. ಈ ಬಾರಿ ಕೊಪ್ಪಳದ ಉದ್ಯಮಿ ಶೇಖರಪ್ಪ ಮುತ್ತೇನ್ನವರ್ ಆಯ್ಕೆಯಾಗಿದ್ದಾರೆ. ಓಮನ್ ರಾಜಧಾನಿ ಮಸ್ಕತ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಇವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಜನಿಸಿದ ಶೇಖರಪ್ಪ ಸದ್ಯ ಯಶಸ್ವಿ ಉದ್ಯಮಿಯಾಗಿ ಬೆಳೆದು ನಿಂತಿದ್ದಾರೆ. ಮೂಲತಃ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ತಾವರಗೇರ ಪಟ್ಟಣದ ಇವರು ಶೇಖರಪ್ಪ ಸದ್ಯ ಕೊಪ್ಪಳದಲ್ಲಿ ನೆಲೆಸಿದ್ದಾರೆ. ಸಹಕಾರಿ ಬ್ಯಾಂಕ್ ನಲ್ಲಿ ಪಿಗ್ಮಿ ಏಜೆಂಟ್ ಆಗಿ ತಮ್ಮ ವೃತ್ತಿ ಬದುಕು ಶುರು ಮಾಡಿ, ಇದೀಗ ಹತ್ತಾರು ಜನರಿಗೆ ಕೆಲಸ ಕೊಡುವಂತೆ ಬೆಳೆದು ನಿಂತಿದ್ದಾರೆ.

ಕೊಪ್ಪಳ ಜಿಲ್ಲಾ ಕೇಂದ್ರ ಸೇರಿ ಜಿಲ್ಲೆಯ ಬೇರೆ ಬೇರೆ ಕಡೆಗೆ ಜಮೀನು ಖರೀದಿ ಮಾಡಿ, ಲೇ ಔಟ್ ಮಾಡುತ್ತಿದ್ದಾರೆ. ಅತ್ಯಂತ ಯೋಗ್ಯ ದರದಲ್ಲಿ ನಿವೇಶನ ನೀಡುವ ಮೂಲಕ ಸ್ವಂತಃ ಮನೆ ಕಟ್ಟಿಕೊಳ್ಳುವ ಮಧ್ಯಮ ವರ್ಗದವರ ಕನಸು ನನಸು ಮಾಡುತ್ತಿದ್ದಾರೆ.

ಇದರ ಜೊತೆಗೆ ಶೇಖರಪ್ಪ ಸಾಮಾಜಿಕ ಕಾರ್ಯದಲ್ಲೂತಮ್ಮನ್ನುತಾವುತೊಡಗಿಸಿಕೊಂಡಿದ್ದು, ನಿರಂತರವಾಗಿಸಮಾಜಮುಖಿಕೆಲಸಮಾಡುತ್ತಿದ್ದಾರೆ. ಸದ್ಯ ಭಾರತ್ ಸ್ಕೌಟ್ಸ್ ಆ?ಯಂಡ್ ಗೈಡ್ಸ್ ನ ಜಿಲ್ಲಾ ಆಯುಕ್ತರಾಗಿ, ವಿವೇಕ ಜಾಗೃತಿ ಬಳಗ ತಂಡ, ಕೊಪ್ಪಳದ ಮಳೆ ಮಲ್ಲೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾಗಿ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಯುವ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸಮಾಜ ಸೇವೆ ಮಾಡುತ್ತಿದ್ದಾರೆ.

# ಜನಾರ್ಧನ ರೆಡ್ಡಿ ಉಚ್ಚಾಟನೆಗೆ, ಸ್ವಾಭಿಮಾನಿ ಶ್ರೀರಾಮುಲು ಅಭಿಮಾನಿ ಬಳಗ ಒತ್ತಾಯ



**ಬಾಗಲಕೋಟೆ :** ಗಾಲಿ ಜನಾರ್ಧನ ರೆಡ್ಡಿ ಅವರು ತಮ್ಮ ಮಾತುಗಳನ್ನು ಹಿಂಪಡೆದು ಶ್ರೀರಾಮುಲು ರವರ ಬಳಿ ಕ್ಷಮೆ ಕೇಳಬೇಕು ಎಂದು ಸ್ವಾಭಿಮಾನಿ ಬಿ. ಶ್ರೀರಾಮುಲು ಅಭಿಮಾನಿ ಬಳಗದ ಮುಖಂಡ ಪ್ರಕಾಶ ನಾಯ್ಕರ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಗಂಗಾವತಿ ಶಾಸಕ ಗಾಲಿ ಜನಾರ್ದನ್ ರೆಡ್ಡಿ ಅವರು ಬಿ. ಶ್ರೀರಾಮುಲು ರವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದು, ಅವರ ಏಳಿಗೆ ಮತ್ತು ಸಾಧನೆಯನ್ನು ಅವಮಾನಿಸುವಂತಹ ಮಾತುಗಳನ್ನು ಆಡಿದ್ದಾರೆ. ನಾವು ವಾಲ್ಮೀಕಿ ಸಮುದಾಯದ ಜನ ಸ್ವಾಭಿಮಾನಿಗಳು. ನಾವು ಏನನ್ನಾದರೂ ಸಹಿಸಬಹುದು, ಆದರೆ ಸ್ವಾಭಿಮಾನಕ್ಕೆ ಧಕ್ಕೆ ಮಾಡಿದರೆ ಸಹಿಸಲಾಗದು ಎಂದ ಅವರು, ನಮ್ಮ ಸಮುದಾಯದ ಪ್ರಬಲ ನಾಯಕ ಹಾಗೂ ಯಾರಿಗೂ ಕೇಡು ಬಯಸದ ರಾಜಕಾರಣಿ ಬಿ. ಶ್ರೀರಾಮುಲು ಅವರ ಬಗ್ಗೆ ಹಗುರವಾಗಿ ಮಾತನಾಡಿರುವ ಜನಾರ್ಧನ್ ರೆಡ್ಡಿ ಅವರನ್ನು ತಕ್ಷಣವೇ ಭಾರತೀಯ ಜನತಾ ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಅವರು ಒತ್ತಾಯಿಸಿದರು. ಬಿಜೆಪಿ ಪಕ್ಷವು ಈ ಕುರಿತು ತನ್ನ ನಿಲುವು ಸ್ಪಷ್ಟಪಡಿಸಬೇಕು. ಭವಿಷ್ಯದಲ್ಲಿ ನಮ್ಮ ವಾಲ್ಮೀಕಿ ಸಮುದಾಯದ ನಾಯಕರಿಗೆ ಅಥವಾ ಶ್ರೀರಾಮುಲು ರವರಿಗೆ ಅವಮಾನಿಸುವಂತಹ ಪರಿಪಾಠವನ್ನು ತಕ್ಷಣವೇ ನಿಲ್ಲಿಸಬೇಕು. ಇಲ್ಲವಾದರೆ, ನಮ್ಮ ಸಮುದಾಯ ತಕ್ಕ ಪಾಠ ಕಲಿಸುವುದರಲ್ಲಿ ಯಾವುದೇ ಸಂದೇಹವಿಲ್ಲ," ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಂ.ವಾಯ್. ವಡದಾನಿ, ನಿಂಗಪ್ಪ ದಿವಟಗಿ, ರಾಮಣ್ಣ ನಾಯ್ಕರ, ಯಮನೂರ ಗುಡಸಲಮನಿ, ಹನುಮಂತ ತಳವಾರ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಕೋಟೆಕಲ್ಲದಲ್ಲಿ ಸಂಜೀವಿನಿ ಕ್ಯಾಂಟಿನ್ ಉದ್ಘಾಟನೆ ಸಂಜೀವಿನಿ ಕ್ಯಾಂಟಿನ್‌ದಲ್ಲಿ ಗುಣಮಟ್ಟದ ಆಹಾರ



**ಗುಳೇದಗುಡ್ಡ :** ಜನರ ಆರೋಗ್ಯಕ್ಕೆ ಅಹಿತಕರವಾಗದಂತೆ ಶುಚಿ ರುಚಿಯಾದ ಗುಣಮಟ್ಟದ ಆಹಾರ ತಯಾರಿಸಿ ಗ್ರಾಹಕರ ಪ್ರೀತಿಗೆ ಪಾತ್ರವಾಗಿ ಆರ್ಥಿಕ ಅಭಿವೃದ್ಧಿ ಕಾಣಬೇಕು. ಸಹೋದರಿ ಕ್ಯಾಂಟೀನ್ ಮೂಲಕ ಗುಣಮಟ್ಟದ ಆಹಾರಕ್ಕೆ ಆದ್ಯತೆ ನೀಡಲಾಗುತ್ತದೆ ಎಂದು ಕೋಟೆಕಲ್ ಗ್ರಾಪಂ ಪಿಡಿಓ ಆರತಿ ಕ್ಷತ್ರಿ ಹೇಳಿದರು.

ಸಮೀಪದ ಕೋಟೆಕಲ್ ಗ್ರಾಮದಲ್ಲಿ ಜಿಪಂ ತಾಪಂ, ಕಟಗೇರಿ ಗ್ರಾಮ ಪಂಚಾಯಿತಿ ಮತ್ತು ಶ್ರೀ ಮಾರುತೇಶ್ವರ ಸಂಜಿವಿನಿ ಸ್ವ- ಸಹಾಯ ಸಂಘಗಳ ಆಶ್ರಯದಲ್ಲಿ 'ಸಹೋದರಿ ಸಂಜೀವಿನಿ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿ,

ಮಹಿಳೆಯರ ಜೀವನೋಪಾಯ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡುವಲ್ಲಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ಆಹಾರವನ್ನು ಶುಚಿ ರುಚಿಯಾಗಿ ಕೈಗೆಟಕುವ ದರದಲ್ಲಿ ಒದಗಿಸುವ ಉದ್ದೇಶದಿಂದ ಮಹಿಳೆಯರೇ ನಡೆಸುವ ಅಕ್ಕ ಕೆಫೆ, ಕಾಫಿ ಕಿಯೋಸ್ಕ ಗಳನ್ನು ರಾಜ್ಯಾದ್ಯಂತ ಒಂದೇ ಮಾದರಿಯಲ್ಲಿ ತೆರೆಯಲಾಗಿದ್ದು ಅದೇ ರೀತಿ ಕೋಟೆಕಲ್ ಗ್ರಾಮದಲ್ಲಿ ಶ್ರೀ ಮಾರುತೇಶ್ವರ ಸಂಜಿವಿನಿ ಸ್ವ-ಸಹಾಯ ಗುಂಪಿನಿಂದ ಸಹೋದರಿ ಸಂಜೀವಿನಿ ಕ್ಯಾಂಟಿನ್ ಆರಂಭಿಸಲಾಗಿದೆ ಎಂದು

ಗ್ರಾಪಂ ಅಧ್ಯಕ್ಷೆ ಅಧ್ಯಕ್ಷೆ ಮಹಾಲಿಂಗವ್ವ ಎಮ್ಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಮೈಲಾರಲಿಂಗ ಆಲೂರ, ಶೋಭಾ ಹುಚ್ಚೇಶ್ವರಮಠ, ಶೃತಿ ಪತ್ತಾರ, ಸಂಗವ್ವ ಕುಂದರಗಿ, ಯಲ್ಲವ್ವ ಹಾದಿಮನಿ, ಅನ್ನಪೂರ್ಣ ಬಡಿಗೇರ,ತುಳಸವ್ವ ಬಡಿಗೇರ, ಹುಚ್ಚಮ್ಮ ಪಟ್ಟೇದ, ಕಾಳವ್ವ ಕಂಬಾರ, ಶಶಿಕಲಾ ಕಮತರ, ನಾಗರತ್ನಾ ಅಬಕಾರಿ, ಲಕ್ಷ್ಮೀ ಅಬಕಾರಿ, ರಾಧಾ ಮಂತ್ರಿ, ಸವಿತಾ ಆಲುರ, ರತ್ನಾ ಹಿರೇಮಠ, ಜ್ಯೋತಿ ಹಿರೇಮಠ, ಮಂಜುಳಾ ಹಡಪದ ಸೇರಿದಂತೆ ಇತರರು ಇದ್ದರು.

# ರಾಷ್ಟ್ರಮಟ್ಟದ ಸೈಕ್ಲಿಂಗ್‌ನಲ್ಲಿ ಸಾಧನೆ ಮಾಡಿದ ಪೂರ್ವಿ ಸಿದ್ದವ್ವಗೋಳಗೆ ಅಭಿನಂದನೆ



**ಬಾಗಲಕೋಟೆ :** ನಗರದ ಶಂಕ್ರಪ್ಪ ಸಕ್ರಿ ಪ್ರೌಢಶಾಲೆ ವಿದ್ಯಾರ್ಥಿನಿಯಾದಕುಮಾರಿ.ಪೂರ್ವಿಸಿದ್ದವ್ವಗೋಳ ಇವರು ಬಿಹಾರ ರಾಜ್ಯದಲ್ಲಿ ನಡೆದ ರಾಷ್ಟ್ರಮಟ್ಟದ 15 ಕಿ.ಮೀ ರೋಡ್ ಸೈಕ್ಲಿಂಗ್ ಸ್ಪರ್ದೆಯಲ್ಲಿ ನಾಲ್ಕನೇ ಸ್ಥಾನ ಹಾಗೂ ಜಾರ್ಖಂಡದಲ್ಲಿ ನಡೆದ ರಾಷ್ಟ್ರಮಟ್ಟದ 2 ಕಿ.ಮೀ ಪರ್ಶ್ಯೂಟ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಒಂಬತ್ತನೇ ಸ್ಥಾನವನ್ನುಪಡೆಡಿದ್ದಾಳೆ,ಕುಮಾರಿ.ಮಧುಬೆಂಡಿಗೇರಿ ಜಾರ್ಖಂಡದಲ್ಲಿ ನಡೆದ ರಾಷ್ಟ್ರಮಟ್ಟದ 2 ಕಿ.ಮೀ ಪರ್ಶ್ಯೂಟ್ ಸೈಕ್ಲಿಂಗ್ ಸ್ಪರ್ದೆಯಲ್ಲಿ ಹದಿನಾಲ್ಕನೇ ಸ್ಥಾನವನ್ನು ಪಡೆಡಿದ್ದಾಳೆ, ಈ ವಿದ್ಯಾರ್ಥಿನಿಯರು ರಾಜ್ಯಕ್ಕೆ, ಜಿಲ್ಲೆಗೆ ಹಾಗು ಶಾಲೆಗೆ ಕೀರ್ತಿ ತಂದಿದ್ದಾರೆ. ಇವರ ಸಾಧನೆ ಕಂಡು ವಿದ್ಯಾಪ್ರಸಾರಕ ಮಂಡಳದ ಕಾರ್ಯಧ್ಯಕ್ಷರಾದ ಶ್ರೀಮತಿ ಶ್ರೀಲತಾ ಹೆರಂಜಲ್, ಗೌರವ ಕಾರ್ಯದರ್ಶಿಗಳಾದ ಡಾ॥ ಗಿರೀಶ .ಮಾಸೂರಕರ ಹಾಗೂ ಸರ್ವ ಸದಸ್ಯರು ಮತ್ತು ಉಪಪ್ರಾಚಾಯಾರಾದ ಶ್ರೀ. ಬಿ.ಎಚ್.ಲಮಾಣಿ, ದೈಹಿಕ ಶಿಕ್ಷಕರಾದ ಶ್ರೀ. ವ್ಹಿ.ಎಸ್.ದೇಸಾಯಿ, ಶ್ರೀ. ಪಿ.ಎಸ್. ವಡ್ಡರ ಹಾಗೂ ಶಿಕ್ಷಕ ಸಿಬ್ಬಂದಿ ವರ್ಗದವರು ಸಾಧನೆಯನ್ನು ಶ್ಲಾಘಿಸಿ ಹೃದಯಪೂರ್ವಕವಾಗಿ ಅಭಿನಂದಿಸಿದ್ದಾರೆ.

# ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗ ಭೇಟಿ ಪರಿಶೀಲನೆ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿ ವೀಕ್ಷಿಸಿದ ಕುರೇರ




**ಬಾಗಲಕೋಟೆ :** ಮುಧೋಳ ತಾಲೂಕಿನ ಅಕ್ಕಿಮರಡಿ ಗ್ರಾಮದಲ್ಲಿರುವ ಉನ್ನತಿಕರಿಸಿದ ಸರಕಾರಿ ಪ್ರೌಢಶಾಲೆಯ 10 ಕೊಠಡಿಗಳ ನಿರ್ಮಾಣ ಕಾಮಗಾರಿಯ ಸ್ಥಳಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಭೇಟಿ ನೀಡಿ ಕಾಮಗಾರಿ ವೀಕ್ಷಣೆ ಮಾಡಿದರು.

ಮಂಗಳವಾರಅಕ್ಕಿಮರಡಿಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಮಗಾರಿ ವೀಕ್ಷಣೆ ಮಾಡಿ ಗುಣಮಟ್ಟದಕ್ಕೆ ಹೆಚ್ಚಿನ ಒತ್ತು ನೀಡಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದ ಅವರು ಸರಕಾರಿ ಪ್ರೌಢಶಾಲಾ ಮಕ್ಕಳೊಂದಿಗೆ ಬಿಸಿಊಟ ಸೇವನೆ ಮಾಡಿದರು. ನಂತರ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಹಾಜರಾತಿ ಪರಿಶೀಲಿಸಿ,

ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರದ ಗುಣಮಟ್ಟ ಕಾಪಾಡಿಕೊಳ್ಳಲು ಸೂಚಿಸಿದರು. ಸ್ವಚ್ಛತೆಗೆ ಹೆಚ್ಚಿನ ಮಹತ್ವಕೊಟ್ಟು ಕಲಿಕಾ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿಕೊಳ್ಳಲು ತಿಳಿಸಿದರು.

ಕೇಸರಕೊಪ್ಪದಲ್ಲಿರುವ ಪದವಿ ಪೂರ್ವ ಕಾಲೇಜಿನ ಕೊಠಡಿ ನಿರ್ಮಾಣ ಕಾಮಗಾರಿ ವೀಕ್ಷಣೆ ಮಾಡಿದರು. ಡಾ.ಬಿ.ಆರ್. ಅಂಬೇಡ್ಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು ಮಿರ್ಜಿ ಗ್ರಾಮದಲ್ಲಿರುವ ಸರಕಾರಿ



ಪ್ರೌಢಶಾಲೆಯ ಎರಡು ಕೊಠಡಿ ನಿರ್ಮಾಣ ಕಾಮಗಾರಿ, ಉತ್ತೂರ ಪ್ರಾಥಮಿಕಆರೋಗ್ಯಕೇಂದ್ರಭೇಟಿ, ಮೆಟಗುಡ್ಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ವಲಯ ಸಭೆ ನಡೆಸಿದರು.

ಮೇಟಗುಡ್ಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೈಗೊಂಡ ದುರಸ್ತಿ ಕಾಮಗಾರಿ ವೀಕ್ಷಣೆ ಮಾಡಿ ನಿಂಗಾಪೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದ ಬಿಸಿ ಊಟ ವೀಕ್ಷಣೆ ಮಾಡಿದರು. ದಾದನಟ್ಟಿ ಗ್ರಾಮ ಪಂಚಾಯತ ಕಾರ್ಯಾಲಯ, ಅಂಗವನಾಡಿ ಕೇಂದ್ರ 67ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ದಾದನಟ್ಟಿ ಜಲ ಸಂರಕ್ಷಣ ಘಟಕದ ಕಾಮಗಾರಿ, ಕೆರೆ ಜೀರ್ಣೋದ್ದಾರೆ ಕಾಮಗಾರಿ, ಲೋಕಾಪೂರ ಬಾಲಕರ ಪೋಸ್ಟ ಮೆಟ್ರಿಕ್ ವಸತಿ ನಿಲಯದ ಕಾಮಗಾರಿ, ರೈತ ಸಂಪರ್ಕ ಕೇಂದ್ರದಲ್ಲಿ ಪೇವಸ್ ಅಳವಡಿಕೆ ಹಾಗೂ ಬಾಲಕಿಯರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯ ಕಾಮಗಾರಿ ಪರಿಶೀಲನೆ ಮಾಡಿದರು.

ಭೇಟಿ ವೇಳೆಯಲ್ಲಿ ಮುಧೋಳ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ಸಿದ್ನಾಳ, ಗ್ರಾಮೀಣ ಕುಡಿಯುವ ನೀರು ಯೋಜನೆಯ ಕಾರ್ಯಪಾಲ ಅಭಿಯಂತರ ಆಕಾಶ ವಂದೆ, ಸಹಾಯಕ ಕಾರ್ಯಪಾಲಕ ಅಭಿಯಂತರ ಆರ್.ಬಿ. ಚೆಲುವಯ್ಯ, ಪಂಚಾಯತ ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲ ಅಭಿಯಂತರ ಎಂ.ಐ.ಅಂಬಿಗೇರ ಸೇರಿದಂತೆ ಇತರರು ಇದ್ದರು.

## ವಿದ್ಯೆಯೊಡನೆ ವಿನಯ, ಸಂಸ್ಕಾರ ಸಮ್ಮಿಳಿತವಾದರೆ

# ಬದುಕು ಸುಂದರ: ಡಾ. ಸುಗಮದ



**ರಬಕವಿ-ಬನಹಟ್ಟಿ :** ವಿದ್ಯೆಯ ಜೊತೆಗೆ ವಿನಯ ಮತ್ತು ಸಂಸ್ಕಾರ ಸಮ್ಮಿಳಿತಗೊಂಡರೆ ಬದುಕು ಸುಂದರಗೊಳ್ಳುತ್ತದೆಂದು ನಿವೃತ್ತ ಪ್ರಾಚಾರ್ಯ ಡಾ. ಸುರೇಶಬಾಬು ಸುಗಮದ ಹೇಳಿದರು.

ರಬಕವಿಯ ಶ್ರೀ ಗುರು ವಿದ್ಯಾವರ್ಧಕ ಸಂಘದ ಎಸ್. ಕೆ. ಬೆಟಗೇರಿ ಎಲ್ಪಿಎಸ್ನ ದಶಮಾನೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾವಂತರೆಲ್ಲ ಸುಸಂಸ್ಕೃತರಲ್ಲ. ನಮಗಿಂದು ವಿದ್ಯೆಯ ಗರ್ವವಿಲ್ಲದ ವಿನಯತೆ ಹಾಗೂ ಸಂಸ್ಕಾರ ಹೊಂದಿರುವ ಪೀಳಿಗೆಯನ್ನು ರೂಪಿಸಬೇಕಿದೆ. ಅಹಂಕಾರದಿಂದ ಜ್ಞಾನದ ಮರಣವಾದರೆ, ವಿಕೃತಿಯಾಗದ ಸಂಸ್ಕೃತಿ, ವಿನಯತೆಯು ಬದುಕನ್ನು ಸುಂದರಗೊಳಿಸುತ್ತದೆಂದರು.

ಶಾಸಕ ಸಿದ್ದು ಸವದಿ ಮಾತನಾಡಿ ಮಧ್ಯಮ ವರ್ಗದ ಜನತೆಗೂ ಕೈಗೆಟಕುವ ದರದಲ್ಲಿ ಶಿಕ್ಷಣದ ದಾಸೋಹ ನಡೆಸುತ್ತಿರುವ ಸಂಸ್ಥೆಯು ದಶಮಾನ ಕಳೆದದ್ದು, ಅನುಕರಣೀಯವೆಂದರು.

ಹಿಂದೂ ಸಂಘಟನೆ ಧುರೀಣ ಶಿವಾನಂದ ಗಾಯಕವಾಡ ಶಿಕ್ಷಣದಲ್ಲಿ ನಮ್ಮ ಭಾರತೀಯ ಸಂಸ್ಕೃತಿ ಮತ್ತು ನಮ್ಮ ಹಿಂದಿನ ಪೀಳಿಗೆಯ ಉದಾತ್ತ ಶೂರರ ಬಗ್ಗೆ ಪಠ್ಯಕ್ರಮದಲ್ಲಿ ಅಳವಡಿಸಬೇಕೆಂದರು.

ಮೈಗೂರಿನ ಶಿವಾನಂದ ಶ್ರೀಗಳು ಮಾತನಾಡಿ, ಮನೆಯ ಮಕ್ಕಳಂತೆ ಶಾಲೆಯ ಎಲ್ಲ ಮಕ್ಕಳೊಡನೆ ಶಿಕ್ಷಕರ ನಡೆಯಿರಬೇಕು. ಅಕ್ಷರವಂತರಾಗಿ, ಜ್ಞಾನವಂತರಾಗಿಸಲು ತಾಳ್ಮೆ, ಸಹಕಾರ ಬೇಕೆಂದರು. ಸಂಸ್ಕಾರವಂತ ಪ್ರಜೆಯಾಗಿ ರೂಪಿಸಿದಲ್ಲಿ ಸಂಸ್ಥೆ ದೇಶಸೇವೆ ಮಾಡಿದಷ್ಟು ಸಮನಾಗುತ್ತದೆಂದರು. ಶಂಕರಣ್ಣ ಅಮ್ಮಲಜೇರಿ ಶಾಲೆ ಬೆಳೆದು ಬಂದ ರೀತಿಯನ್ನು ಹಾಡಿನ ರೂಪದಲ್ಲಿ ಪ್ರಸ್ತುತ ಪಡಿಸಿದರು. ಈ ಸಂದರ್ಭದಲ್ಲಿ ಸದಾಶಿವ ದೊಡ್ಡಪ್ಪಗೋಳ, ಚೆನ್ನಪ್ಪ ಬೆಟಗೇರಿ, ಅಜೀತ ಬೆಟಗೇರಿ, ಬಿ. ಎಂ. ಹಳೇಮನಿ, ಮು. ಗು. ಎಸ್. ಬಿ. ಫಕೀರಪುರ, ಮುಂಬೈನ ನೀತಾ ಅನಂತ ಪಾವಸ್ಕರ, ತೃಪ್ತಿ ರಾಜಶೇಖರ ಶೀಲವಂತ, ಪಿ. ಆರ್. ಶಿಂಪಿ, ಬಸವರಾಜ ಶಿವಣಗಿ, ಮಲ್ಲೇಶಪ್ಪ ಕುಚನೂರ, ಕೆ. ಎನ್. ನೀಲಕಂಠಮಠ, ಶಂಕರ ಬೆಟಗೇರಿ, ಆನಂದ ಕಂಪು, ಮಾಲಿಂಗ ಘಂಟಿ ವೇದಿಕೆಯ ಮೇಲೆ ಆಸೀನರಾಗಿದ್ದರು.

ಅಮೃತಾ ಸಿದ್ದಾಪೂರ ಸ್ವಾಗತಿಸಿದರು. ವಿದ್ಯಾ ಬೆಟಗೇರಿ ನಿರೂಪಿಸಿದರು. ಎಸ್. ಸಿ. ಕೋಟಿ ವಂದಿಸಿದರು. ಎಸ್. ಟಿ. ಕಮತೆ, ಎ. ಎಸ್. ಅರಬಳ್ಳಿ, ಜಿ. ಎನ್. ಸಣಪೇಟೆ, ಪಿ. ಎಸ್. ಬಾಬಾನಗರ ಉಪಸ್ಥಿತರಿದ್ದರು.

# ಶುದ್ಧ ಗಾಳಿಯ ಅವಶ್ಯಕತೆಯ ಜಾಗೃತಿ ಅಗತ್ಯ




**ರಬಕವಿ-ಬನಹಟ್ಟಿ :** ನೀಲಿ ಆಕಾಶಕ್ಕಾಗಿ ಶುದ್ಧ ಗಾಳಿಗಾಗಿ ಅಂತರರಾಷ್ಟ್ರೀಯ ದಿನಾಚರಣೆಯನ್ನು ಪ್ರತಿ ವರ್ಷ ಸಪ್ಟೆಂಬರ್ 7 ರಂದು ಆಚರಣೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿಯನ್ನು ಮೂಡಿಸುವ ಅಂಗವಾಗಿ ಈ ಕಾರ್ಯಕ್ರಮವನ್ನು ಕಾಲೇಜುಗಳಿಗೂ ವಿಸ್ತರಿಸಲಾಗಿದೆ. ವಾಯು ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸುವುದು ಈ ದಿನದ ಉದ್ದೇಶವಾಗಿದೆ ಎಂದು ಬಾಗಲಕೋಟೆ ಜಿಲ್ಲಾ ಕೀಟ ಶಾಸ್ತ್ರಜ್ಞ ಎಂ. ಎಲ್. ಹಸರೆಡ್ಡಿ ತಿಳಿಸಿದರು.

ಅವರು ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೀಲಿ ಆಕಾಶಕ್ಕಾಗಿ ಶುದ್ಧ ಗಾಳಿ ಅಂತರರಾಷ್ಟ್ರೀಯ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮಾತನಾಡಿದರು.


ಬೆಳೆಯುತ್ತಿರುವ ನಗರೀಕರಣ ಮತ್ತು ಕೈಗಾರಿಕೆಗಳಿಂದಾಗಿ ಪರಿಸರದ ಮೇಲೆ ಸಾಕಷ್ಟು ಸಮಸ್ಯೆಗಳು ಉಂಟಾಗುತ್ತಿವೆ. ಮುಂದಿನ ದಿನಗಳಲ್ಲಿ ಎಲ್ಲರಿಗೂ ಉತ್ತಮ ಆರೋಗ್ಯ, ಗಾಳಿ, ಬೆಳಕು ಮತ್ತು ಪರಿಸರ ನೀಡುವ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಪ್ರತಿಯೊಬ್ಬರಲ್ಲಿ ಜಾಗೃತಿ ಮುಖ್ಯವಾಗಿದೆ ಎಂದು ಹಸರೆಡ್ಡಿ ತಿಳಿಸಿದರು.

ರಬಕವಿ ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದ ನರಸಿಂಹ ಗಲಗಲಿ ಕೀಟದಿಂದ ಬರುವ ಮಲೇರಿಯಾ, ಡೆಂಗೆ ಮತ್ತು ಚಿಕೂನ್ ಗುನ್ಯಾ ರೋಗಗಳ ಕುರಿತು ಮಾಹಿತಿ ನೀಡಿದರು.

ಕಾಲೇಜು ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮೇಲ್ವಿಚಾರಕ ಎಂ. ಬಿ. ಸನ್ನಕ್ಕಿ, ಅಪ್ಪಾಜಿ ಹೂಗಾರ, ಕಾಲೇಜು ಉಪನ್ಯಾಸಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಹಮ್ಮಿಕೊಂಡ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ಪ್ರಿಯಾಂಕಾ ಬಾಗಡೆ, ವಿನಯ ಅಲಕನೂರ ಮತ್ತು ಅಮೃತಾ ಇವರಿಗೆ ಬಹುಮಾನ ನೀಡಲಾಯಿತು.

# ಕಾಮೆಡ್ಕೆ /ಯುನಿ-ಗೇಜ್ ಪ್ರವೇಶ ಪರೀಕ್ಷೆ-ಅರ್ಜಿ ದಿನಾಂಕ ಪ್ರಕಟ




**ಬೆಂಗಳೂರು :** "ಕಾಮೆಡ್ಕೆಯಲ್ಲಿ, ವಿದ್ಯಾರ್ಥಿಯ ಅರ್ಹತೆ ಮತ್ತು ಯೋಗ್ಯತೆಯು ಅವರ ಶೈಕ್ಷಣಿಕ ಪ್ರಯಾಣಕ್ಕೆ ಏಕೈಕ ಮಾರ್ಗದರ್ಶಿ ಅಂಶಗಳಾಗಿವೆ ಎಂದು ನಾವು ದೃಢವಾಗಿ ನಂಬುತ್ತೇವೆ ಎಂದು ಕಾಮೆಡ್ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಕುಮಾರ್ ಹೇಳಿದ್ದಾರೆ. ಕಾಮೆಡ್ಕೆಯುಜಿಇಟಿ/ಯುನಿ-ಗೇಜ್ 2025 ಪ್ರವೇಶ ಪರೀಕ್ಷೆಯನ್ನು ಶನಿವಾರ, ಮೇ 10, 2025 ರಂದು ನಿಗದಿಪಡಿಸಲಾಗಿದೆ. ಈ ಏಕೀಕೃತ ಪರೀಕ್ಷೆಯು ಕರ್ನಾಟಕದ 150 ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳಿಗೆ, ಜೊತೆಗೆ ಭಾರತದಾದ್ಯಂತದ 50+ ಪ್ರತಿಷ್ಠಿತ ಖಾಸಗಿ, ಸ್ವಯಂ ಅನುದಾನಿತ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಪ್ರವೇಶಕ್ಕೆ ಪ್ರವೇಶದ್ವಾರವಾಗಿ ಕಾರ್ಯನಿರ್ವಹಿಸುತ್ತದೆ. ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ (ಕೆಯುಪಿಇಸಿಎ) ಮತ್ತು ಯುನಿ-ಗೇಜ್ ಸದಸ್ಯ ವಿಶ್ವವಿದ್ಯಾಲಯಗಳಿಗೆ ಸಂಯೋಜಿತವಾಗಿರುವ ಸಂಸ್ಥೆಗಳು ನೀಡುವ ಬಿಇ / ಬಿಟೆಕ್ ಕಾರ್ಯಕ್ರಮಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಈ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಆನ್ಲೈನ್ ಪರೀಕ್ಷೆಯು ಭಾರತದ 200+ ನಗರಗಳಲ್ಲಿ ನಡೆಯಲಿದ್ದು, 400 ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳನ್ನು ಒಳಗೊಂಡಿದೆ. 1,20,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ. ಭಾರತದಾದ್ಯಂತದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಅರ್ಜಿಗಳನ್ನು ಫೆಬ್ರವರಿ 3, 2025 ರಿಂದ ಮಾರ್ಚ್ 15, 2025 ರೊಳಗೆ www.comedk.org ಅಥವಾ www.unigauge.com ಆನ್ ಲೈನ್ ನಲ್ಲಿ ಸಲ್ಲಿಸಬಹುದು.

2022 ರಲ್ಲಿ, ಕಾಮೆಡ್ಕೆ ಕೌಶಲ್ಯ-ವರ್ಧನೆ ಕೋರ್ಸ್ಗಳನ್ನು ಒದಗಿಸುವ ಮೂಲಕ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು 8 ಕಾಮೆಡ್ಕೆ ಕರೆಸ್ ಇನ್ನೋವೇಶನ್ ಹಬ್ಗಳನ್ನು ಪರಿಚಯಿಸಿತು. ಕಾಮೆಡ್ಕೆ ಈಗ ಕರ್ನಾಟಕದಾದ್ಯಂತ 10 ಇನ್ನೋವೇಶನ್ ಹಬ್ಗಳನ್ನು ಹೊಂದಿದೆ, ಅವುಗಳಲ್ಲಿ 4 ಬೆಂಗಳೂರಿನಲ್ಲಿ ಮತ್ತು ಉಳಿದವು ಮೈಸೂರು, ಕಲಬುರಗಿ, ಮಂಗಳೂರು, ಬೆಳಗಾವಿ, ತುಮಕೂರು ಮತ್ತು ಹುಬ್ಬಳ್ಳಿಯಲ್ಲಿವೆ. ಈ ಕೇಂದ್ರಗಳು ತಲಾ 5,000 ಚದರ ಅಡಿಗಳಷ್ಟು ವಿಸ್ತಾರವಾಗಿದ್ದು, ಮರದ ರೂಟಿಂಗ್, ರಾಪಿಡ್ ಪ್ರೊಟೊಟೈಪಿಂಗ್, ಲೇಸರ್ ಕಟಿಂಗ್, 3 ಡಿ ಪ್ರಿಂಟರ್ಗಳು, ಎಆರ್ / ವಿಆರ್ ತಂತ್ರಜ್ಞಾನ ಮತ್ತು ಹೆಚ್ಚಿನವುಗಳನ್ನು ಒಳಗೊಂಡಂತೆ ಅತ್ಯಾಧುನಿಕ ಉಪಕರಣಗಳನ್ನು ಹೊಂದಿವೆ. ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ (ಎಐಎಂಎಲ್), ರೊಬೊಟಿಕ್ಸ್, ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ), ಇನ್ನೋವೇಶನ್ ಮತ್ತು ಡಿಸೈನ್ ಥಿಂಕಿಂಗ್ (ಐಡಿಟಿ), ಸಾಮಾಜಿಕ ನಾವೀನ್ಯತೆ ಕ್ಷೇತ್ರ ಭೇಟಿಗಳು ಮತ್ತು ಡೇಟಾ ಸೈನ್ಸ್ ನಂತಹ ಅತ್ಯಾಧುನಿಕ ಕ್ಷೇತ್ರಗಳಲ್ಲಿ ನಾವೀನ್ಯತೆ ಕೇಂದ್ರಗಳು ಕಾರ್ಯಕ್ರಮಗಳನ್ನು ನೀಡುತ್ತವೆ. ಕಾಮೆಡ್ಕೆಯ ಈ ಪ್ರವರ್ತಕ ಉಪಕ್ರಮದ ಮೂಲಕ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೌಶಲ್ಯ ಆಧಾರಿತ ತರಬೇತಿಯನ್ನು ಪರಿಚಯಿಸಿದ ಮೊದಲ ರಾಜ್ಯ ಕರ್ನಾಟಕ.

ಕಾಮೆಡ್ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಕುಮಾರ್ ಮಾತನಾಡುತ್ತಾ, "ಕಾಮೆಡ್ಕೆಯಲ್ಲಿ, ವಿದ್ಯಾರ್ಥಿಯ ಅರ್ಹತೆ ಮತ್ತು ಯೋಗ್ಯತೆಯು ಅವರ ಶೈಕ್ಷಣಿಕ ಪ್ರಯಾಣಕ್ಕೆ ಏಕೈಕ ಮಾರ್ಗದರ್ಶಿ ಅಂಶಗಳಾಗಿವೆ ಎಂದು ನಾವು ದೃಢವಾಗಿ ನಂಬುತ್ತೇವೆ. ಕಾಮೆಡ್ಕೆ ಯುಜಿಇಟಿ ನ್ಯಾಯಯುತ, ಪಾರದರ್ಶಕತೆ ಮತ್ತು ಸಮಾನ ಅವಕಾಶಕ್ಕೆ ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ. ಯುವ ಪ್ರತಿಭೆಗಳನ್ನು ಗುಣಮಟ್ಟದ ಶಿಕ್ಷಣದೊಂದಿಗೆ ಸಂಪರ್ಕಿಸಲು ನಾವು ಹೆಮ್ಮೆಪಡುತ್ತೇವೆ" ಎಂದರು.

ಇಆರ್ಎ ಫೌಂಡೇಶನ್ನ ಸಿಇಒ ಪಿ.ಮುರಳೀಧರ್ ಮಾತನಾಡುತ್ತಾ, "ಯುನಿ-ಗೇಜ್ ಮೂಲಕ ನ್ಯಾಯಸಮ್ಮತತೆ ಮತ್ತು ವಸ್ತುನಿಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಎತ್ತಿಹಿಡಿಯಲು ನಾವು ಬದ್ಧರಾಗಿದ್ದೇವೆ, ಇದು ಭಾರತದ ಭವಿಷ್ಯದ ಕಾರ್ಯಪಡೆಯ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸಲು ಸಮಗ್ರ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಮಹತ್ವದ ಉದ್ದೇಶಕ್ಕೆ ಕೊಡುಗೆ ನೀಡಲು ನಾವು ಹೆಮ್ಮೆಪಡುತ್ತೇವೆ" ಎಂದರು.

ಸಂಪೂರ್ಣ ಅರ್ಜಿ ಮತ್ತು ಪರೀಕ್ಷಾ ಪ್ರಕ್ರಿಯೆಯನ್ನು ಆನ್ ಲೈನ್ ನಲ್ಲಿ ನಡೆಸಲಾಗುವುದು. ಅರ್ಜಿ ಮತ್ತು ಪರೀಕ್ಷಾ ಪ್ರಕ್ರಿಯೆಯ ವಿವರವಾದ ಮಾರ್ಗಸೂಚಿಗಳು www.comedk.org ಮತ್ತು www.unigauge.com ನಲ್ಲಿ ಲಭ್ಯವಿದೆ.

ಪ್ರಮುಖ ಸೂಚನೆ: www.comedk.org ಮತ್ತು www.unigauge.com ಮಾತ್ರ ಕಾಮೆಡ್ಕೆ ಮತ್ತು ಯುನಿ-ಗೇಜ್ ಅಧಿಕೃತ ವೆಬ್ಸೈಟ್ಗಳಾಗಿವೆ. ವಿದ್ಯಾರ್ಥಿಗಳು ಮತ್ತು ಪೋಷಕರು ಅರ್ಜಿ ಮತ್ತು ಮಾಹಿತಿಗಾಗಿ ಅಧಿಕೃತ ವೆಬ್ಸೈಟ್ಗಳನ್ನು ಮಾತ್ರ ಬಳಸಲು ಸೂಚಿಸಲಾಗಿದೆ.

# ಬೆಂಬಲ ಬೆಲೆಯಲ್ಲಿ ಕಡಲೆಕಾಳು ಖರೀದಿ

**ಬಾಗಲಕೋಟೆ :** ಜವಾಹರ ನವೋದಯ ವಿದ್ಯಾಲಯದ 9 ಮತ್ತು 11ನೇ ತರಗತಿಯ ಪ್ರವೇಶ ಪರೀಕ್ಷೆ ಫೆಬ್ರವರಿ 8, 2025 ರಂದು ನಡೆಯಲಿದೆ. ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಲು ಅಗತ್ಯವಾದ ಪ್ರವೇಶ ಪತ್ರಗಳನ್ನು ಅಧಿಕೃತ ವೆಬ್ಸೈಟ್ (https://cbseitms.nic.in/2024/nvsix) ಮತ್ತು (https://cbseitms.nic.in/2024/nvsxi_11) ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದು ಎಂದು ಪಿ.ಎಂ.ಶ್ರೀ ಜವಾಹರ್ ನವೋದಯ ವಿದ್ಯಾಲಯ, ಚಿರ್ಲಕೊಪ್ಪ, ಕುಳಗೇರಿ ಕ್ರಾಸ್ ಪ್ರಾಂಶುಪಾಲ ಎಸ್.ಎಸ್. ಅಸಾರಿ ಈ ಬಗ್ಗೆ ಅಧಿಕೃತ ಪ್ರಕಟಣೆ ನೀಡಿದ್ದು, ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿಕೊಳ್ಳುವಂತೆ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಾತಂಡಗಳ ಆಯ್ಕೆಗೆ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಂಗವಾಗಿ, ಸಾರ್ವಜನಿಕರಲ್ಲಿ ಆರೋಗ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಜಾನಪದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಜಾನಪದ ಕಲಾ ತಂಡಗಳ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ.

ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ಜಾನಪದ ಕಲಾ ತಂಡಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಹಾಗೂ ಬ್ಯಾಂಕ್ ಖಾತೆ ಸಂಖ್ಯೆ, ಅನುಭವ ಪ್ರಮಾಣ ಪತ್ರ, ಹಳೆ ಜಾಗೃತಿ ಕಾರ್ಯಕ್ರಮಗಳ ಛಾಯಾಚಿತ್ರಗಳು, ಕೇಂದ್ರ ಸಂಗೀತ ಮತ್ತು ನಾಟಕ ವಿಭಾಗ, ಮಾಹಿತಿ ಮತ್ತು ಪ್ರಸಾರ ಮಂತ್ರಾಲಯ ಭಾರತ ಸರ್ಕಾರ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವುಗಳಲ್ಲಿ ನೊಂದಣಿಗೊಂಡ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಅರ್ಹ ಅರ್ಜಿದಾರರು ಫೆಬ್ರವರಿ 5 ರೊಳಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 130 & 31 ರಲ್ಲಿ ಅರ್ಜಿ ಸಲ್ಲಿಸುವಂತ ಪ್ರಕಟಣೆ ತಿಳಿಸಿದೆ.

## ಆಸ್ತಿ ತೆರಿಗೆ ಹಣ ಪಾವತಿಸದಿದ್ದರೆ ಕಾನೂನು ಕ್ರಮ

**ತೇರದಾಳ :** ಪುರಸಭೆಗೆ ಸಂದಾಯ ಮಾಡಬೇಕಾಗಿರುವ ಆಸ್ತಿ ತೆರಿಗೆ, ನೀರಿನ ಕರ, ಭೂ ಬಾಡಿಗೆ ಸೇರಿದಂತೆ ಆಸ್ತಿ ತೆರಿಗೆ ಹಣ ಬಾಕಿ ಉಳಿಸಿಕೊಂಡವರು ಕೂಡಲೇ ಪಾವತಿಸಬೇಕು. ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಹಾಗೂ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಎಚ್ಚರಿಕೆ ನೀಡಿದ್ದಾರೆ. ಈ ಕುರಿತು ಜಂಟಿಯಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2024-25 ನೇ ಸಾಲಿನ ತೆರಿಗೆ ಹಣ ಪಾವತಿಸಲು ಕೊನೆಯ ದಿನಗಳು ಸಮೀಪಿಸುತ್ತಿವೆ. ಜತೆಗೆ 2025-26 ನೇ ಸಾಲಿನ ತೆರಿಗೆ ಹಣವನ್ನು ಪಾವತಿಸಬೇಕು. ಹಲವು ಸಂಘ ಸಂಸ್ಥೆಗಳು ಹಾಗೂ ಸಮಾಜದಲ್ಲಿ ದೊಡ್ಡವರು, ಪ್ರತಿಷ್ಠಿತರು ಎನಿಸಿಕೊಂಡವರು ಹಲವು ವರ್ಷಗಳಿಂದ ಆಸ್ತಿ ತೆರಿಗೆ ಹಣವನ್ನು ಪಾವತಿಸುತ್ತಿಲ್ಲ. ಜತೆಗೆ ಅನಧಿಕೃತ ಕಟ್ಟಡ, ಅನಧಿಕೃತ ನಳ ಜೋಡಣೆ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿ ಪುರಸಭೆಗೆ ವಂಚನೆ ಮಾಡುವುದರಿಂದ ಪಟ್ಟಣದಲ್ಲಿ ಸಾರ್ವಜನಿಕರಿಗಾಗಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ತುಂಬಾ ತೊಂದರೆ ಆಗುತ್ತಿದೆ. ಎಲ್ಲವೂ ಸರಕಾರದ ಅನುದಾನದಿಂದ ಮಾಡಲು ಆಗುವುದಿಲ್ಲ. ಕೆಲವು ಕಾಮಗಾರಿಗಳನ್ನು ಪುರಸಭೆ ಆದಾಯದಲ್ಲಿಯೇ ನಿರ್ವಹಣೆ ಮಾಡಬೇಕಾಗುತ್ತದೆ. ಸಾರ್ವಜನಿಕರು ಈ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕು. ಪುರಸಭೆ ಸಿಬ್ಬಂದಿ ಕರ ವಸೂಲಿಗೆ ಬಂದಾಗ ಅವರೊಂದಿಗೆ ಅಸಭ್ಯವಾಗಿ ವರ್ತಿಸದೇ ತೆರಿಗೆ ಹಣ ಬಾಕಿ ಪಾವತಿಸಬೇಕು. ಅನಧಿಕೃತವಾಗಿ ಹೊಂದಿರುವ ಕಟ್ಟಡ ಹಾಗೂ ನಳ ಜೋಡಣೆಗಳನ್ನು ಸಕ್ರಮವಾಗಿ ಮಾಡಿಕೊಳ್ಳಲು ಅವಕಾಶ ಇದೆ. ಆದ್ದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಅಧ್ಯಕ್ಷೆ ಶಿಲ್ಪಾ ರೋಡಕರ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ರಾಜಕುಮಾರ ಚವರೆ ನಿಧನ



**ಝುಳಕಿ :** ರಾಜಕುಮಾರ ಬಾಬಾಸಾಹೇಬ ಚವರೆ ವಯಸ್ಸು 62 ಭಾನುವಾರ ನಿಧನ ಹೊಂದಿದರು, ಮೃತರಿಗೆ ಪತ್ನಿ, ಒಂದು ಗಂಡು ಮಗ, ಒಂದು ಹೆಣ್ಣು ಮಗಳು ಮತ್ತು ತಮ್ಮ ಅಪಾರ ಬಂಧು ಬಳಗ ಹೊಂದಿದ್ದಾರೆ.

# ಎರಡು ವರ್ಷಗಳಿಂದ ಅರ್ಧಕ್ಕೆ ನಿಂತ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆಗ್ರಹ



**ಕೆ ಆರ್ ಪೇಟೆ :** ತಾಲ್ಲೂಕಿನ ನಾರ್ಗೋನಹಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿ ಕೆಲಸ ಕೈಗೊಂಡು 2 ವರ್ಷ ಕಾಲಿಟ್ಟಿದ್ದು ಸಂಪೂರ್ಣವಾಗಿ ಕೆಲಸ ಪೂರ್ಣಗೊಳಿಸದೇ ಅರ್ಧಕ್ಕೆ ನಿಲ್ಲಿಸಿದ್ದು.

ರಸ್ತೆಯ ಪಕ್ಕದಲ್ಲಿರುವ ಶಾಲಾ ಮಕ್ಕಳಿಗೆ ಹಾಗೂ ಅಂಗನವಾಡಿ ಮಕ್ಕಳಿಗೆ ರಸ್ತೆಯಿಂದ ಬರುವ ಧೂಳಿನಿಂದ ತುಂಬಾ ತೊಂದರೆಯಾಗುತ್ತಿತ್ತು. ಅದೇ ರೀತಿ ರಸ್ತೆಯ ಅಕ್ಕ ಪಕ್ಕದ ಮನೆಯವರಿಗೆ ಜಲ್ಲಿಕಲ್ಲು ಮಿಶ್ರಿತ ರಸ್ತೆಯಲ್ಲಿ ಬರುವಂತಹ ಧೂಳಿನಿಂದ ತೊಂದರೆ ಅನುಭವಿಸುವಂತಗಿದೆ ಅದರಲ್ಲೂ ಈ ಭಾಗದಲ್ಲಿ ದಿನನಿತ್ಯ ಸಾರ್ವಜನಿಕ, ದ್ವಿಚಕ್ರ ವಾಹನ ಆಟೋಗಳು ಸಂಚರಿಸಿ ರಸ್ತೆಗೆ ಹಾಕಿರುವ ಜಲ್ಲಿಕಲ್ಲು ಮಿಶ್ರಿತವಾದ ರಸ್ತೆ ಸಂಚಾರ-ಕ್ಕೆ ಸಮಸ್ಯೆ ಆಗಿದ್ದು ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಗುತ್ತಿಗೆದಾರರು ರಸ್ತೆಯನ್ನು ಸಂಪೂರ್ಣಗೊಳಿಸಿ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಗ್ರಾಮದ ಯುವ ಮುಂಖಂಡ ಲೋಕೇಶ್. ಎನ್. ಜೆ. ರವರು ಗುತ್ತಿಗೆದಾರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು,_ ಇದೆ ಸಂದರ್ಭದಲ್ಲಿ ಗ್ರಾಮದ ಯುವ ಮುಖಂಡ ಲೋಕೇಶ್.

ಎನ್. ಜೆ. ಗಿರೀಶ್. ನಿತೇಶ್. ಪ್ರಭುದೇವ. ಗ್ರಾಮದ ಯುವಕರು ಇದ್ದರು.

ವರದಿ :ಎಸ್ ರವಿ ಹೊನ್ನೇನಹಳ್ಳಿ


# ಹೊಟೇಲ್‌ನಲ್ಲಿ ಕಳ್ಳತನ ಮಾಡಿದ ಭೂಪ




**ತೇರದಾಳ :** ಇಲ್ಲಿನ ಪೇಟೆ ಭಾಗದ ಹನುಮಾನ ದೇವಸ್ಥಾನ ಬಳಿ ಪುರಸಭೆ ಮಳಿಗೆಯಲ್ಲಿರುವ ಸಾಕ್ಷಿನ್ ಹೊಟೇಲ್ನಲ್ಲಿ ಅಡುಗೆ ತಯಾರಿಸುತ್ತಿದ್ದ ಮಂಡ್ಯ ಜಿಲ್ಲೆಯ ರಘು ಆರ್ ಎಂಬ ಕಾರ್ಮಿಕ ರಾತ್ರಿ ವೇಳೆ ಹೊಟೇಲ್ ಗಲ್ಲಾದಲ್ಲಿನ 25 ಸಾವಿರ ಹಣವನ್ನು ಕಳುವು ಮಾಡಿ ಓಡಿಹೋಗಿದ್ದು, ಕೊನೆಗೆ ಪೊಲೀಸರ ಬಲೆಗೆ ಬಿದ್ದ ಘಟನೆ ತೇರದಾಳದಲ್ಲಿ ನಡೆದಿದೆ.

ಘಟನೆ ವಿವರ: ಇಲ್ಲಿನ ಸಾಕ್ಷಿನ್ ಹೊಟೇಲ್ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹೊಟೇಲ್ ಮೇಲಿನ ಭಾಗದಲ್ಲಿ ವಾಸಿಸುವುದಕ್ಕೆ ಶೆಡ್ ನಿರ್ಮಿಸಲಾಗಿದೆ. ರಾತ್ರಿ ಎಲ್ಲರೂ ಅಲ್ಲಿಯೇ ಮಲಗುತ್ತಾರೆ. ಅಡುಗೆ ಮಾಡಲು (ಕೂಕ್) ಬಂದಿದ್ದ 35 ವಯಸ್ಸಿನ ರಘು ಆರ್. ಎಂಬ ಯುವಕನು ಜನೇವರಿ 26 ರಂದು ಮಧ್ಯರಾತ್ರಿ ಒಂದು ಗಂಟೆ ವೇಳೆಗೆ ಮೇಲಿನಿಂದ ಹೊಟೇಲ್ ಒಳಗೆ ಬಂದು ಗಲ್ಲಾದಲ್ಲಿನ 25 ಸಾವಿರ ಹಣವನ್ನು ಕಳ್ಳತನ ಮಾಡಿ ಫರಾರಿಯಾಗಿದ್ದನು. ಬೆಳಿಗ್ಗೆ ಎದ್ದು ಎಲ್ಲರೂ ನೋಡುವಷ್ಟರಲ್ಲಿ ರಘು ಇರಲಿಲ್ಲ. ಅಷ್ಟರಲ್ಲಿ ಮ್ಯಾನೇಜರ್ ಆಗಮಿಸಿ ಪರಿಶೀಲಿಸಿದಾಗ ಹಣ ಕಳ್ಳತನ ಮಾಡಿಕೊಂಡು ಹೋಗಿರುವ ಬಗ್ಗೆ ತಿಳಿದಿದೆ. ಈ ಕುರಿತು ಮ್ಯಾನೇಜರ್ ಪ್ರಥಮ ಹರೀಶ ಶೆಟ್ಟಿ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಘಟನೆಯನ್ನು ಗಂಭೀರವಾಗಿ ತಗೆದುಕೊಂಡ ಪಿಎಸ್ಐ ಅಪ್ಪಣ್ಣ ಐಗಳಿ, ಬನಹಟ್ಟಿ ಸಿಪಿಐ ಸಂಜೀವ ಬಳಗಾರ ಮಾರ್ಗದರ್ಶನಲ್ಲಿ ತಂಡ ರಚಿಸಿಕೊಂಡು ಆರೋಪಿ ಬಂಧನಕ್ಕಾಗಿ ಜಾಲ ಬೀಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪೋಲೀಸ್ ಸಿಬ್ಬಂದಿಗಳಾದ ಅಶೋಕ ಸವದಿ, ವಿವೇಕ ಸುವರ್ಣಖಂಡಿ, ಸಾಗರ ಲಗಳಿ, ರಮೇಶ ಪಾಟೀಲ್, ವಿಠ್ಠಲ ಲಮಾಣಿ ತನಿಖಾ ತಂಡದಲ್ಲಿದ್ದರು.

# ಹದಗೆಟ್ಟ ರಸ್ತೆ...! ಸಾರ್ವಜನಿಕರು, ವಾಹನ ಚಾಲಕರು ಅಸಮಾಧಾನ...!



**ಕೆ.ಆರ್.ಪೇಟೆ :** ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಒಂದಾದ ಹೊಸ ಕಿಕ್ಕೇರಿ ರಸ್ತೆಯಲ್ಲಿ ಕರ್ನಾಟಕ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಸೇರಿದಂತೆ ಹಲವು ವಾಣಿಜ್ಯ ಅಂಗಡಿಗಳನ್ನು ಒಳಗೊಂಡಿದ್ದು ಈ ರಸ್ತೆಯಲ್ಲಿ ದಿನನಿತ್ಯ ಹಳ್ಳಿಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಬ್ಯಾಂಕ್ ವ್ಯವಹಾರಕ್ಕೆ ಆಗಮಿಸುತ್ತಿದ್ದು ಅಲ್ಲಲ್ಲಿ ರಸ್ತೆಗಳು ಗುಂಡಿ ಬಿದ್ದಿದ್ದು ವಾಹನಗಳು ಸಂಚರಿಸಲು ಸಾದ್ಯವಿಲ್ಲ, ಈ ಮಾರ್ಗದಲ್ಲಿ ದಿನನಿತ್ಯ ಹಳ್ಳಿಯಿಂದ ಸಾವಿರಾರು ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ಬರುತ್ತಿದ್ದು ಅಲ್ಲದೇ ಪ್ರಸಿದ್ಧ ಪುಣ್ಯಕ್ಷೇತ್ರವಾದ ಹೇಮಗಿರಿ, ಶ್ರೀ ಚಂದಗೋಳಮ್ಮ ದೇವಾಸ್ಥಾನಕ್ಕೆ ಹೆಚ್ಚು ಭಕ್ತರು ಸಂಚರಿಸುತ್ತಿದ್ದು ಸಾರ್ವಜನಿಕರು ವಾಹನಗಳಲ್ಲಿ ಸಂಚರಿಸಲು ಕಷ್ಟವಾಗಿದ್ದು ಅಂಗಡಿಯ ಮಾಲೀಕರು ಅಲ್ಲಲ್ಲಿ ಕಲ್ಲು-ಮಣ್ಣು ಹಾಕಿದರೂ ಸಹ ದಿನೇ ದಿನೇ ರಸ್ತೆಯಲ್ಲಿ ಗುಂಡಿಗಳು ಹೆಚ್ಚಾಗಿದೆ,ಅಲ್ಲದೇ ಸ್ಥಳೀಯ ಜನಪ್ರತಿನಿಧಿಗಳು ಈ ರಸ್ತೆಯಲ್ಲೇ ಓಡಾಡುತ್ತಿದ್ದು ಯಾವುದೇ ಸಂಬಂಧವಿಲ್ಲದಂತೆ ಇರುವುದು ಬೇಸರದ ಸಂಗತಿ ಎಂದು ಸಾರ್ವಜನಿಕರು, ಅಂಗಡಿ ಮುಂಗಟ್ಟಿನ ಮಾಲೀಕರು ಬೇಸರ ವ್ಯಕ್ತಪಡಿಸಿದ್ದಾರೆ, ಮುಂದಿನ ದಿನಗಳಲ್ಲಾದರೂ ರಸ್ತೆಗಳ ಗುಂಡಿ ಮುಚ್ಚಿ ಸಾರ್ವಜನಿಕ ಸಂಚಾರಕ್ಕೆ ಅನುಕೂಲ ಮಾಡುತ್ತಾರಾ..? ಕಾದು ನೋಡೋಣ..!

ವರದಿ: ಎಸ್ ರವಿ ಹೊನ್ನೇನಹಳ್ಳಿ

# ಕಾವ್ಯ ಪಟ್ಟಣಶೆಟ್ಟಿ ಜನ್ಮದಿನದ ಪ್ರಯುಕ್ತ ಬಡ ವಿದ್ಯಾರ್ಥಿನಿಗೆ ಸೈಕಲ್ ವಿತರಣೆ: ತಂಬ್ರಳ್ಳಿ ಮೆಚ್ಚುಗೆ




**ಕೊಪ್ಪಳ :** ಕೊಪ್ಪಳ ಇನ್ನರ್ ವೀಲ್ ಕ್ಲಬ್ ಮಾಜಿ ಅಧ್ಯಕ್ಷರಾದ ಪ್ರತಿಮಾ ಪಟ್ಟಣಶೆಟ್ಟಿ ಯವರ ಮಗಳು ಕುಮಾರಿ ಕಾವ್ಯ ಪಟ್ಟಣಶೆಟ್ಟಿ ಯವರ ಜನ್ಮದಿನದ ಪ್ರಯುಕ್ತ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಅವಶ್ಯಕ ಉಳ್ಳ ಬಡ ವಿದ್ಯಾರ್ಥಿನಿ ಒಬ್ಬಳಿಗೆ ಸೈಕಲ್ ವಿತರಣೆ ಮಾಡುವುದರ ಮೂಲಕ ಪ್ರತಿಮಾ ಪಟ್ಟಣಶೆಟ್ಟಿಯವರು ತಮ್ಮ ಮಗಳ ಜನ್ಮ ದಿನಾಚರಣೆಯನ್ನು ಆಚರಿಸಿದ್ದಾರೆ ಅವರ ಈ ಜನ ಸೇವಾ ಕಾರ್ಯ ಇತರರಿಗೆ ಮಾದರಿಯಾಗಿದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಹಾಲಿ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಬಣ್ಣಿಸಿದ್ದಾರೆ. ಅವಶ್ಯಕತೆ ಉಳ್ಳ ಅರ್ಹ ಬಡ ಗ್ರಾಮೀಣ ವಿದ್ಯಾರ್ಥಿನಿಗೆ ಶಾಲೆಗೆ ಹೋಗಲು ಅನುಕೂಲವಾಗಲು ಸೈಕಲ್ ದೇಣಿಗೆ ನೀಡುವುದರ ಮೂಲಕ ಮಾನವೀಯತೆ ಮೌಲ್ಯ ಎತ್ತಿ ಹಿಡಿದಿದ್ದಾರೆ, ಇದು ಒಳ್ಳೆಯ ಕಾರ್ಯ ಇದರಿಂದ ಬಡ ಪ್ರತಿಭಾವತ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರ ಶೈಕ್ಷಣಿಕ ಬೆಳವಣಿಗೆಗೆ ಅತ್ಯಂತ ಅನುಕೂಲ ಮತ್ತು ಸಹಕಾರಿಯಾಗಿದೆ ಇಂಥ ಮಹತ್ವದ ಕಾರ್ಯ ಕೈಗೊಂಡಿರುವ ಪ್ರತಿಮಾ ಪಟ್ಟಣ ಶೆಟ್ಟಿ ಮತ್ತು ಬಡ ವಿದ್ಯಾರ್ಥಿನಿಗೆ ಸೈಕಲ್ ದೇಣಿಗೆ ನೀಡಿ ತನ್ನ ಜನ್ಮದಿನಾಚರಣೆಯನ್ನು ಆಚರಿಸಿಕೊಂಡ ಕುಮಾರಿ ಕಾವ್ಯ ಪಟ್ಟಣಶೆಟ್ಟಿ ಅವರಿಗೆ ಉಮಾ ಮಹೇಶ್ ತಂಬ್ರಳ್ಳಿ ರವರು ಅಭಿನಂದಿಸಿ ಶುಭ ಕೋರಿದ್ದಾರೆ, ಈ ಸಂದರ್ಭದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಜೊತೆಗೆ ಮಾಜಿ ಅಧ್ಯಕ್ಷರಾದ ಮತ್ತು ಈ ಉತ್ತಮ ಕಾರ್ಯಕ್ಕೆ ಕಾರನಿಕರ್ತರಾದ ಪ್ರತಿಮಾ ಪಟ್ಟಣಶೆಟ್ಟಿ, ಸುಜಾತ ಪಟ್ಟಣಶೆಟ್ಟಿ ಕವಿತಾ ಶೆಟ್ಟರ್ ಯಲಬುರ್ಗಾ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಶಕುಂತಲಾ ಕಾರ್ಯಕಾರಣಿ ಸಮಿತಿ ಸದಸ್ಯರಾದ ನೀತಾ ತಂಬ್ರಳ್ಳಿ, ಕ್ಲಬ್ಬಿನ ಜಿಲ್ಲಾ ಐಎಸ್ಓ ಶರಣಮ್ಮ ಪಾಟೀಲ್ ,ಮಂಗಳ ತಂಬ್ರಳ್ಳಿ ಮಧು ನಿಲೋಗಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State